ಇ-ಪೇಪರ್: www.epaperbharathasarathi.com | ಇಮೇಲ್: desk.newsbox@gmail.com



ವಿಜಯ್ ದಳಪತಿ ಸ್ನೇಹಿತೆ ತ್ರಿಶಾಗೆ ಸೋಮವಾರ ಹುಟ್ಟುಹಬ್ಬದ ಸಂಭ್ರಮ. ಜೊತೆಗೆ ಟಿವಿಕೆ ಅತೀ ಹೆಚ್ಚು ಸ್ಥಾನಗಳನ್ನು ಪಡೆದ ಸಂಭ್ರಮವೂ ಹೌದು. ತಿರುಪತಿಯಲ್ಲಿ ಬೆಳ್ಳಂಬೆಳಿಗ್ಗೆಯೇ ವಿಶೇಷ ಪೂಜೆ ಸಲ್ಲಿಸಿದ ತ್ರಿಶಾ ಕೃಷ್ಣನ್ ಅವರು ನಂತರ ನೇರವಾಗಿ ಚೆನ್ನೈನಲ್ಲಿರುವ ದಳಪತಿ ವಿಜಯ್ ಅವರ ಮನೆಗೆ ತೆರಳಿ ಸಂಭ್ರಮಾಚರಣೆಯಲ್ಲಿ ಭಾಗಿಯಾದ ಜೊತೆಗೆ ತಿಮ್ಮಪ್ಪನ ಪ್ರಸಾದವನ್ನೂ ವಿತರಿಸಿದ್ದಾರೆ.

BHARATHA SARATHI
KANNADA DAILY NEWS PAPER

# ಭಾರತ ಸಾರಥಿ

CALL 9740160669

RNI KARKAN2011/44806

ಸದಾ ನಿಮ್ಮೊಂದಿಗೆ ಕನ್ನಡ ದಿನಪತ್ರಿಕೆ

prabhavaa.com



ಸಂಪಾದಕ
ಗಂಡಸಿ ಸದಾನಂದಸ್ವಾಮಿ





# ದಳಪತಿ ಮ್ಯಾಜಿಕ್

## ದೀದಿಗೆ ಗೇಟ್‌ಪಾಸ್

ಪಶ್ಚಿಮ ಬಂಗಾಳ, ಅಸ್ಸಾಂ, ತಮಿಳುನಾಡು, ಕೇರಳ ಮತ್ತು ಪುದುಚೇರಿ ವಿಧಾನಸಭಾ ಚುನಾವಣೆಯ ಮತ ಎಣಿಕೆ ಮುಗಿಯುತ್ತಿದ್ದಂತೆ ಹೊರಬಂದ ಟ್ರೆಂಡಿಂಗ್ ಶಾಕಿಂಗ್ ಫಲಿತಾಂಶ ತೋರಿಸಿದೆ.

ಚುನಾವಣಾ ಆಯೋಗದ ವಿವಾದಾತ್ಮಕ ವಿಶೇಷ ತೀವ್ರ ಪರಿಷ್ಕರಣೆ ನೆರಳಿನಲ್ಲಿ ವಿಧಾನಸಭಾ ಚುನಾವಣೆ ನಡೆದ ಪಶ್ಚಿಮ ಬಂಗಾಳದಲ್ಲಿ, ಬಿಜೆಪಿ ಸುಮಾರು 200 ಸ್ಥಾನಗಳೊಂದಿಗೆ ಐತಿಹಾಸಿಕ ಗೆಲುವು ಸಾಧಿಸಿದೆ. 2021 ರ ಚುನಾವಣೆಯಲ್ಲಿ 294 ಸ್ಥಾನಗಳ ಪೈಕಿ 215 ಸ್ಥಾನಗಳನ್ನು ಗೆದಿದ್ದ ಆಡಳಿತಾರೂಢ ಟಿಎಂಸಿ ಕೇವಲ 88 ಸ್ಥಾನಗಳಿಗೆ ಕುಸಿದಿದೆ.

ತಮಿಳುನಾಡಿನಲ್ಲಿ, ನಟ-ರಾಜಕಾರಣಿ ವಿಜಯ್ ಅವರ ತಮಿಳಗ ವೆಟ್ರಿ ಕಳಗಂ100 ಕ್ಕೂ ಹೆಚ್ಚು ಸ್ಥಾನಗಳನ್ನು ಗಳಿಸುವ ಮೂಲಕ ಆಘಾತಕಾರಿ ಫಲಿತಾಂಶವನ್ನು ನೀಡಿದೆ. ತಮಿಳುನಾಡಿನಲ್ಲಿ ಯಾವಾಗಲೂ ಡಿಎಂಕೆ ಹಾಗೂ ಎಐಎಡಿಎಂಕೆಯೊಂದಿಗೆ ಪೈಪೋಟಿ ಇರುತಿತ್ತು.

ಡಿಎಂಕೆ ನಾಯಕ, ಮುಖ್ಯಮಂತ್ರಿ ಎಂ ಕೆ ಸ್ಟಾಲಿನ್ ಅವರ ಭದ್ರಕೋಟೆ ಕೊಳತ್ತೂರಿನಲ್ಲಿ ಸೋತಿದ್ದಾರೆ. ಆದರೆ ಪಕ್ಷವು ಕೇವಲ ಮೂರು ಸ್ಥಾನಗಳನ್ನು ಗೆಲ್ಲುವಲ್ಲಿ ಯಶಸ್ವಿಯಾಗಿದ್ದು, 55 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿದೆ. ಪೆರಂಬೂರು ಮತ್ತು ತಿರುಚ್ಚಿ ಪೂರ್ವ ಎರಡೂ ಕ್ಷೇತ್ರಗಳಲ್ಲಿ ವಿಜಯ್ ಮುಂದಿದ್ದರೆ, ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಕೆ ಪಳನಿಸ್ವಾಮಿ ಎಡಪ್ಪಾಡಿಯಲ್ಲಿ ಮುನ್ನಡೆ ಕಾಯ್ದುಕೊಂಡಿದ್ದಾರೆ. ಅಸ್ಸಾಂನಲ್ಲಿ, ಆಡಳಿತಾರೂಢ ಬಿಜೆಪಿ ನೇತೃತ್ವದ ಎನ್‌ಡಿಎ ಆರು ಸ್ಥಾನಗಳನ್ನು ಗೆದ್ದು 94 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿದೆ. ಅಧಿಕಾರವನ್ನು ಉಳಿಸಿಕೊಂಡಿದೆ. ಬಿಜೆಪಿ ಐದು ಸ್ಥಾನಗಳಲ್ಲಿ ಗೆದ್ದಿದ್ದು, 76 ಸ್ಥಾನಗಳಲ್ಲಿ ಮುನ್ನಡೆ ಕಾಯ್ದುಕೊಂಡಿದೆ. ಆದರೆ ಅದರ ಮಿತ್ರಪಕ್ಷಗಳಾದ ಅಸ್ಸಾಂ ಗಣ ಪರಿಷತ್ (ಎಜಿಪಿ) ಮತ್ತು ಬೋಡೋಲ್ಯಾಂಡ್ ಪೀಪಲ್ಸ್ ಫ್ರಂಟ್ 18 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿವೆ. ಕಾಂಗ್ರೆಸ್ 20 ಸ್ಥಾನಗಳಲ್ಲಿ ಮತ್ತು ಅದರ ಮಿತ್ರಪಕ್ಷ ರೈಜೋರ್ ದಳ ಒಂದರಲ್ಲಿ ಮುನ್ನಡೆ ಸಾಧಿಸಿದ್ದರೆ, ಎಐಯುಡಿಎಫ್ ಎರಡು ಸ್ಥಾನಗಳಲ್ಲಿ ಮುಂದಿದೆ. ಕೇರಳದಲ್ಲಿ ಸತತ ಎರಡು ವರ್ಷಗಳ ಕಾಲ ಅಧಿಕಾರದಿಂದ ಹೊರಗುಳಿದಿದ್ದ ಯುಡಿಎಫ್ ಮತ್ತೆ ಕಂಬ್ಯಾಕ್ ಮಾಡಿದೆ.





ಅಸ್ಸಾಂ, ಪಶ್ಚಿಮಬಂಗಾಳ, ಪುದುಚರಿಯಲ್ಲಿ ಬಿಜೆಪಿ ಭಾರೀ ವಿಜಯದತ್ತ ಹೆಜ್ಜೆ ಹಾಕಿದ ಹಿನ್ನೆಲೆಯಲ್ಲಿ ಬೆಂಗಳೂರಿನ ಬಿಜೆಪಿ ಕಚೇರಿಯ ಬಳಿ ಬಿಜೆಪಿ ಕಾರ್ಯಕರ್ತರು ಸಿಹಿ ಹಂಚುವ ಮೂಲಕ ಸಂಭ್ರಮಾಚರಣೆಯಲ್ಲಿ ತೊಡಗಿದ್ದರು...

## 'ಗಂಗೋತ್ರಿಯಿಂದ ಗಂಗಾ ಸಾಗರದ ತನಕ ಕಮಲ ಅರಳಿದೆ'

ನವದೆಹಲಿ: ಬಂಗಾಳದ ಗೆಲುವಿನ ಗಂಗೋತ್ರಿಯಿಂದ ಗಂಗಾ ಸಾಗರದ ತನಕ ಕಮಲ ಅರಳಿದೆ. ಹೊಸ ಸೂರ್ಯೋದಯವಾಗಿದ್ದು, ಬಂಗಾಳ ಭಯಮುಕ್ತವಾಗಿದೆ.

ಇಲ್ಲಿನ ಜನರಿಗೆ ನಾನು ಭರವಸೆ ನೀಡುತ್ತೇನೆ. ನಿಮ್ಮ ಉತ್ತಮ ಭವಿಷ್ಯಕ್ಕಾಗಿ ಹಗಲು ರಾತ್ರಿ ಕೆಲಸ ಮಾಡುತ್ತೇವೆ ಎಂದು ಪ್ರಧಾನಿ ನರೇಂದ್ರ ಮೋದಿ ಬಂಗಾಳ ಜನತೆಗೆ ಭರವಸೆ ನೀಡಿದ್ದಾರೆ.

ಪಂಚರಾಜ್ಯ ಚುನಾವಣೆ ಫಲಿತಾಂಶ ಪ್ರಕಟವಾದ ಬೆನ್ನಲ್ಲೇ ಬಿಜೆಪಿ ಕಚೇರಿಯಲ್ಲಿ ವಿಜಯೋತ್ಸವದ ಭಾಷಣ ಮಾಡಿದ ಪ್ರಧಾನಿ ಮೋದಿ, ಬಂಗಾಳ, ಅಸ್ಸಾಂ, ಪುರುಚೇರಿಯಲ್ಲಿ ಅಭೂತಪೂರ್ವ ಗೆಲುವು ಸಾಧಿಸಲು ಕಾರಣರಾದ ಪಕ್ಷದ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸಿದ್ದರು. ನಿತಿನ್ ನಬಿನ್ ಅಧ್ಯಕ್ಷರಾದ ಬಳಿಕ ಇದು ಮೊದಲ ಗೆಲುವು, ಅವರ ಮಾರ್ಗದರ್ಶನ ಬಹಳ ಮೌಲ್ಯಯುತವಾದದ್ದು. ಉಪ ಚುನಾವಣೆಯಲ್ಲೂ ಜನರು ನಮ್ಮಗೆ ಆರ್ಶಿವಾದ ಮಾಡಿದ್ದಾರೆ, ಮಹಾರಾಷ್ಟ್ರದಲ್ಲಿ ಸುನೇತ್ರಾ ಪವಾರ್ ಕೂಡ ಗೆಲುವು ಸಾಧಿಸಿದ್ದಾರೆ. ಉಪ ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಗಳಿಗೂ ಅಭಿನಂದನೆ ಸಲ್ಲಿಸುತ್ತೇನೆ. ಚುನಾವಣೆಯಲ್ಲಿ ಗೆಲುವು ಸೋಲು ಸ್ವಾಭಾವಿಕ, ಆದ್ರೆ ಐದು ರಾಜ್ಯದ ಜನರು ಇಂದು ಭಾರತ ಪ್ರಜಾಪ್ರಭುತ್ವದ ತಾಯಿ





ಅನ್ನೋದನ್ನ ವಿಶ್ವಕ್ಕೆ ತೋರಿಸಿದ್ದಾರೆ ಎಂದು ಬಣ್ಣಿಸಿದರು.


ಪ್ರಜಾಪ್ರಭುತ್ವ ನಮ್ಮ ತಂತ್ರ ಅಲ್ಲ, ನಮ್ಮ ನರ ನಾಡಿಗಳಲ್ಲಿ ಸಂಚರಿಸುವ ಶಕ್ತಿ. ಹಾಗಾಗಿ ಇಂದು ಭಾರತದ ಪ್ರಜಾಪ್ರಭುತ್ವಕ್ಕೆ ಮಾತ್ರವಲ್ಲ, ಭಾರತದ ಸಂವಿಧಾನಕ್ಕೂ ಗೆಲುವಾಗಿದೆ.


ಅಸ್ಸಾಂ, ತಮಿಳುನಾಡು, ಪುದುಚೇರಿ ಕೇರಳದಲ್ಲಿ ಮತದಾನದ ಹೊಸ ದಾಖಲೆ ಸೃಷ್ಟಿಯಾಗಿದೆ. ಇದರಲ್ಲಿ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಾಗಿದೆ. ಅದಕ್ಕಾಗಿ ಚುನಾವಣಾ ಆಯೋಗ, ಎಲ್ಲ ಸಿಬ್ಬಂದಿ ಜೊತೆಗೆ ಭದ್ರತಾಪಡೆಗಳಿಗೂ ಅಭಿನಂದನೆ ಸಲ್ಲಿಸುತ್ತೇನೆ. ಪ್ರಜಾಪ್ರಭುತ್ವ ವ್ಯವಸ್ಥೆ ಗರಿಮೆ ಹೆಚ್ಚಿಸಲು ಇವರ ಕೊಡುಗೆ ಇದೆ, ಇದನ್ನು ನಾವು ನೆನಪಿನಲ್ಲಿಡುತ್ತೇವೆ ಎಂದು ತಿಳಿಸಿದರು.


ಈ ದಿನ ಬಂಗಾಳ ಗೆಲುವಿನ ಮೂಲಕ ಗಂಗೋತ್ರಿಯಿಂದ ಗಂಗಾ ಸಾಗರದ ತನಕ ಕಮಲ ಅರಳಿದೆ. ಗಂಗಾಮಾತೆಯ ಆರ್ಶಿವಾದ ನಮ್ಮ ಮೇಲಿದೆ. ಬ್ರಹ್ಮಪುತ್ರ ಹಾಗೂ ಕಾಮಾಖ್ಯ ದೇವಿಯ ಆಶೀರ್ವಾದವೂ ನಮಗೆ ಸಿಕ್ಕಿದೆ. ಹರಿಯಾಣ, ದೆಹಲಿ, ಬಿಹಾರ ನಿರಂತರವಾಗಿ ಗೆಲುವು ಸಾಧಿಸಿದೆ. ಇಂದು ಅಸ್ಸಾಂ ನಲ್ಲಿ 3ನೇ ಬಾರಿಗೆ ಬಿಜೆಪಿ ಎನ್‌ಡಿಎ ಮೇಲೆ ಭರವಸೆ ಇರಿಸಿದ್ದಾರೆ.



ಭಾರತ ಸಾರಥಿ
05/05/2026
BHARATHA SARATHI KANNADA DAILY NEWS PAPER
ಬೆಂಗಳೂರು | ಬೆಂ.ಗ್ರಾಮಾಂತರ | ತುಮಕೂರು | ಮೈಸೂರು | ಮಂಡ್ಯ | ರಾಮನಗರ | ಕೋಲಾರ | ಚಿಕ್ಕಬಳ್ಳಾಪುರ | ಚಿತ್ರದುರ್ಗ | ದಾವಣಗೆರೆ | ಶಿವಮೊಗ್ಗ | ಮಂಗಳೂರು | ಉಡುಪಿ | ಹುಬ್ಬಳ್ಳಿ | ಮಡಿಕೇರಿ | ಚಿಕ್ಕಮಗಳೂರು | ಹಾಸನ | ಬಳ್ಳಾರಿ
ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

## ಜೆಯುಎಫ್‌ಇಟಿ ತಂಡಗಳಿಗೆ ಬೆಳ್ಳಿ ಮತ್ತು ಕಂಚಿನ ಪ್ರಶಸ್ತಿ

ಬೆಂಗಳೂರು: ಏಪ್ರಿಲ್ 24–26, 2026ರಂದು ಕಾಂಬೋಡಿಯಾ ಸಾಮ್ರಾಜ್ಯದಲ್ಲಿ ನಡೆದ 2026 ರ ಸ್ಟಾರ್ಟ್‌ಅಪ್ ಇನ್ನೋವೇಶನ್ ವೀಕೆಂಡ್ ನಲ್ಲಿ ಜೆಯುಎಫ್‌ಇಟಿ ನ ಎರಡು ವಿದ್ಯಾರ್ಥಿಗಳು ಸ್ಟಾರ್ಟ್‌ಅಪ್ ತಂಡಗಳು ಬೆಳ್ಳಿ ಪ್ರಶಸ್ತಿ ಮತ್ತು ಕಂಚಿನ ಪ್ರಶಸ್ತಿಯನ್ನು ಗೆಲ್ಲುವ ಮೂಲಕ ಸಂಸ್ಥೆಗೆ ಅಂತರರಾಷ್ಟ್ರೀಯ ಮನ್ನಣೆ ತಂದುಕೊಟ್ಟವು.



ಜಾಗತಿಕ ಉದ್ಯಮಶೀಲತಾ ಕಾರ್ಯಕ್ರಮವು 25+ ದೇಶಗಳಿಂದ 20+ ಸ್ಟಾರ್ಟ್‌ಅಪ್‌ಗಳು ಮತ್ತು 30+ ಯೋಜನೆಗಳನ್ನು ಒಟ್ಟುಗೂಡಿಸಿತು, ನಾವೀನ್ಯತೆ, ಮಾರ್ಗದರ್ಶನ ಮತ್ತು ಗಡಿಯಾಚೆಗಿನ ಸಹಯೋಗಕ್ಕಾಗಿ ಒಂದು ರೋಮಾಂಚಕ ವೇದಿಕೆಯನ್ನು ಸೃಷ್ಟಿಸಿತು. ಡಾ. ಗರಿಮಾ ಸಿನ್ಹಾ ಮತ್ತು ಡಾ. ಯೋಗೇಶ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ಅಭಿವೃದ್ಧಿಪಡಿಸಲಾದ ತಮ್ಮ ಸ್ಟಾರ್ಟ್‌ಅಪ್ ಯೋಜನೆಯನ್ನು ಜೆಯು ಎಫ್‌ಇಟಿ ತಂಡವು ಪ್ರಸ್ತುತಪಡಿಸಿತು.

ಅವರ ಕಲ್ಪನೆ, ವ್ಯವಹಾರ ಮಾದರಿ ಮತ್ತು ಪಿಚ್‌ನ ಬಲಕ್ಕಾಗಿ ಅಂತರರಾಷ್ಟ್ರೀಯ ಮಾರ್ಗದರ್ಶಕರು, ಉದ್ಯಮ ತಜ್ಞರು ಮತ್ತು ಹೂಡಿಕೆದಾರರಿಂದ ಮೆಚ್ಚುಗೆಯನ್ನು ಪಡೆಯಿತು. ಮೂರು ತೀವ್ರ ದಿನಗಳಲ್ಲಿ, ಭಾಗವಹಿಸುವವರು ಪಿಚ್ ಸೆಷನ್‌ಗಳು, ಉತ್ಪನ್ನ ಪ್ರದರ್ಶನಗಳು ಮತ್ತು ನೆಟ್‌ವರ್ಕಿಂಗ್ ವೇದಿಕೆಗಳಲ್ಲಿ ತೊಡಗಿಸಿಕೊಂಡರು, ಇದು ಆರಂಭಿಕ ಹಂತದ ಉದ್ಯಮಗಳು ಜಾಗತಿಕ ಮಾನ್ಯತೆ, ತಜ್ಞರ ಪ್ರತಿಕ್ರಿಯೆ ಮತ್ತು ಸ್ಪರ್ಧಾತ್ಮಕ ವಾತಾವರಣದಲ್ಲಿ ಸಂಭಾವ್ಯ ಹೂಡಿಕೆ ಆಸಕ್ತಿಯನ್ನು ಪಡೆಯಲು ಅನುವು ಮಾಡಿಕೊಡುತ್ತದೆ.

ಈ ಕಾರ್ಯಕ್ರಮವು ನವೋದ್ಯಮಗಳಿಗೆ ನವೀನ ವಿಚಾರಗಳನ್ನು ಪ್ರಸ್ತುತಪಡಿಸಲು, ಜಾಗತಿಕ ತಂಡಗಳ ನಡುವೆ ಸಹಯೋಗ ಮತ್ತು ಜ್ಞಾನ ವಿನಿಮಯವನ್ನು ಉತ್ತೇಜಿಸಲು ಮತ್ತು ಭಾಗವಹಿಸುವವರನ್ನು ಮಾರ್ಗದರ್ಶಕರು, ತಜ್ಞರು ಮತ್ತು ಸಂಭಾವ್ಯ ಹೂಡಿಕೆದಾರರೊಂದಿಗೆ ಸಂಪರ್ಕಿಸಲು ಅಂತರರಾಷ್ಟ್ರೀಯ ವೇದಿಕೆಯನ್ನು ಒದಗಿಸಲು ವಿನ್ಯಾಸಗೊಳಿಸಲಾಗಿದೆ. ಈ ನಿಶ್ಚಿತಾರ್ಥದ ಮೂಲಕ, ಅಂತರ–ಸಾಂಸ್ಕೃತಿಕ ನಾವೀನ್ಯತೆ ಮತ್ತು ಉದ್ಯಮಶೀಲತಾ ಬೆಳವಣಿಗೆಯನ್ನು ಉತ್ತೇಜಿಸುವಾಗ ನವೋದ್ಯಮಗಳು ತಮ್ಮ ವ್ಯವಹಾರ ಮಾದರಿಗಳನ್ನು ಮೌಲ್ಯೀಕರಿಸಲು ಮತ್ತು ಪರಿಷ್ಕರಿಸಲು ಸಾಧ್ಯವಾಯಿತು.

# ಹಿರಿಯ ನಾಗರಿಕರ ಆರೋಗ್ಯ, ಆರೈಕೆ













ಬೆಂಗಳೂರು: ಬನ್ನೇರುಘಟ್ಟ ರಸ್ತೆಯ ಕಾಳೇನ ಅಗ್ರಹಾರದಲ್ಲಿ ಸ್ಥಾಪಿತವಾದ ಶ್ರೀ ಸದ್ಗುರು ಆಧಾರ್ ಫೌಂಡೇಶನ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಹಿರಿಯ ನಾಗರಿಕರ ಆರೋಗ್ಯ, ಆರೈಕೆ ಹಾಗೂ ಮನರಂಜನೆಗಾಗಿ ಆರಂಭಿಸಲಾದ ಪುನರ್ವಸತಿ ಕೇಂದ್ರದ ಉದ್ಘಾಟನಾ ಸಮಾರಂಭ ಅದ್ದೂರಿಯಾಗಿ ನಡೆಯಿತು. ಸಮಾಜಮುಖಿ ಚಟುವಟಿಕೆಗಳಿಗೆ ಒತ್ತು ನೀಡುವ ಉದ್ದೇಶದಿಂದ ಆರಂಭಿಸಲಾದ ಈ ಕೇಂದ್ರವು ಹಿರಿಯ ನಾಗರಿಕರಿಗೆ ಸಮಗ್ರ ಸೇವೆ ಒದಗಿಸುವ ಮಹತ್ವಾಕಾಂಕ್ಷಿ ಪ್ರಯತ್ನವಾಗಿದೆ.

ಕಾರ್ಯಕ್ರಮವನ್ನು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ಡಾ. ಸಿ.ಎನ್. ಮಂಜುನಾಥ್ ಉದ್ಘಾಟಿಸಿ ಮಾತನಾಡಿ, ಸಮಾಜದಲ್ಲಿ ಹಿರಿಯ ನಾಗರಿಕರ ಸೇವೆ ಅತ್ಯಂತ ಮಹತ್ವದ್ದಾಗಿದ್ದು, ಇಂತಹ ಸೇವಾ ಮನೋಭಾವದ ಸಂಸ್ಥೆಗಳು ಇನ್ನಷ್ಟು ಬೆಳೆಯಬೇಕು ಎಂದು ಆಶಿಸಿದರು. ಹಿರಿಯರ ಆರೈಕೆ ಕೇವಲ ಕುಟುಂಬದ ಹೊಣೆಗಾರಿಕೆಯಾಗಿರದೇ, ಸಮಗ್ರ ಸಮಾಜದ ಜವಾಬ್ದಾರಿಯೂ ಆಗಿದೆ ಎಂಬುದನ್ನು ಅವರು ಒತ್ತಿ ಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ನಟ ಹಾಗೂ ನಿರ್ಮಾಪಕರಾದ ಗಂಡಸಿ ಸದಾನಂದಸ್ವಾಮಿ ಮಾತನಾಡಿ, ಸಮಾಜಮುಖಿ ಕಾರ್ಯಕ್ರಮಗಳ ಮೂಲಕ ಹಿರಿಯರ ಬದುಕಿಗೆ ಆತ್ಮಸ್ಥೈರ್ಯ ತುಂಬುವ ಕಾರ್ಯ ಶ್ಲಾಘನೀಯವಾಗಿದೆ. ಇಂತಹ ಸಂಸ್ಥೆಗಳು ಹಿರಿಯ ನಾಗರಿಕರ ಬದುಕಿಗೆ ಹೊಸ ಚೈತನ್ಯ ನೀಡುತ್ತವೆ ಎಂದು ಅಭಿಪ್ರಾಯಪಟ್ಟರು.


ಫೌಂಡೇಶನ್ ಟ್ರಸ್ಟಿಗಳಾದ ವಿನಯ್ ಕುಮಾರ್, ಶ್ರೀಮತಿ ಜ್ಯೋತಿ ವಿನಯ್ ಕುಮಾರ್, ಪ್ರವೀಣ್ ಹಾಗೂ ಮೌಶಿಯ ಸುಲ್ತಾನ್ ಅವರ ನೇತೃತ್ವದಲ್ಲಿ ನಡೆದ ಈ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳ ಕಲಾವಿದರಿಗೆ "ಸದ್ಗುರು ಸೇವಾರತ್ನ ಪ್ರಶಸ್ತಿ" ನೀಡಿ ಗೌರವಿಸಲಾಯಿತು.

ವೇದಿಕೆಯಲ್ಲಿ ಹಿರಿಯ ಚಲನಚಿತ್ರ ನಟ ಶಂಕರ್ ಭಟ್, ನಟಿ ಮಧುಶ್ರೀ, ಲಕ್ಷ್ಮೀಭಟ್, ಹೋರಾಟಗಾರರಾದ ಸ್ನೇಹಜೀವಿ ಸಂತೋಷ್ ಕುಮಾರ್, ರಾಜು, ಕನ್ನಡಿಗ, ಸಂಚಾರಿ ಸತೀಶ್, ಸಂಚಾರಿ ಚಾಲಕರ ಸೇವಾ ಟ್ರಸ್ಟ್ ಮುಖ್ಯಸ್ಥೆ ಮೋಹನ್ ಕುಮಾರಿ, ಚಂದ್ರಶೇಖರ ಪಾಟೀಲ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಕಾರ್ಯಕ್ರಮದ ವೇಳೆ ಹಿರಿಯ ನಾಗರಿಕರ ಆರೈಕೆ, ಆರೋಗ್ಯ ಸೇವೆ ಹಾಗೂ ಪುನರ್ವಸತಿ ಸೌಲಭ್ಯಗಳ ಕುರಿತು ವಿವರವಾದ ಮಾಹಿತಿ ನೀಡಲಾಯಿತು. ಹಿರಿಯರಿಗೆ ಉತ್ತಮ ಆರೋಗ್ಯ ಸೇವೆ, ಮನರಂಜನೆ ಹಾಗೂ ಸುರಕ್ಷಿತ ವಾಸಸ್ಥಳ ಒದಗಿಸುವ ನಿಟ್ಟಿನಲ್ಲಿ ಕೇಂದ್ರ ಕಾರ್ಯನಿರ್ವಹಿಸಲಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಸಾಮಾಜಿಕ ಸೇವಾ ಯೋಜನೆಗಳನ್ನು ಕೈಗೊಳ್ಳಲಾಗುತ್ತದೆ ಎಂದು ಟ್ರಸ್ಟ್ ಪದಾಧಿಕಾರಿಗಳು ತಿಳಿಸಿದರು.

## ಏಸಸ್‌ನಿಂದ ಉಚಿತ ಸೇವಾ ಶಿಬಿರ

ಬೆಂಗಳೂರು: ತೈವಾನ್‌ನ ತಂತ್ರಜ್ಞಾನ ದಿಗ್ಗಜ ಏಸಸ್ ಸಂಸ್ಥೆ ಗ್ರಾಹಕ ಅನುಭವವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಬೆಂಗಳೂರಿನಲ್ಲಿ ಉಚಿತ ಸೇವಾ ಶಿಬಿರವನ್ನು ಆಯೋಜಿಸುತ್ತಿದೆ. ಮೇ 9 ರಂದು ನಡೆಯಲಿರುವ ಈ ಶಿಬಿರವು ಏಸಸ್ ಅಶ್ಯೂರೆನ್ಸ್ ಕಾರ್ಯಕ್ರಮದ ಅಂಗವಾಗಿದ್ದು, ಸಾಧನದ ಸಂಪೂರ್ಣ ಜೀವನಚಕ್ರದಲ್ಲಿ ಗುಣಮಟ್ಟದ ಸೇವೆ ಮತ್ತು ಬೆಂಬಲ ಒದಗಿಸುವ ಉದ್ದೇಶ ಹೊಂದಿದೆ.




ಈ ಸೇವಾ ಶಿಬಿರವು ನಗರದ ಫೀನಿಕ್ಸ್ ಮಾರ್ಕೆಟ್ ಸಿಟಿಯಲ್ಲಿರುವ ಏಸಸ್ ಎಕ್ಸ್‌ಕ್ಲೂಸಿವ್ ಸ್ಟೋರ್ ಸಿಸ್ಟೆಕ್ ಐಟಿ ಸೊಲ್ಯೂಷನ್ಸ್ (ಹೈಬ್ರಿಡ್ ಸ್ಟೋರ್ ಪೆಗಾಸಸ್ + ಆರ್‌ಒಜಿ) ನಲ್ಲಿ ನಡೆಯಲಿದೆ. ಬೆಳಿಗ್ಗೆ ಹನ್ನೊಂದು ಗಂಟೆಯಿಂದ ಸಂಜೆ ಐದು ಗಂಟೆಯವರೆಗೆ ಗ್ರಾಹಕರಿಗೆ ತೆರೆಯಲಾಗಿರುತ್ತದೆ.

ಈ ಶಿಬಿರದಲ್ಲಿ ಗ್ರಾಹಕರಿಗೆ ನೇರ ತಾಂತ್ರಿಕ ಬೆಂಬಲ, ಸಾಧನಗಳ ಸಮಗ್ರ ಆರೋಗ್ಯ ತಪಾಸಣೆ ಹಾಗೂ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ತಜ್ಞರ ಮಾರ್ಗದರ್ಶನ ಲಭ್ಯವಾಗಲಿದೆ. ವೃತ್ತಿಪರ ಧೂಳು ಸ್ವಚ್ಛತೆ, ಹೀಟಿಂಗ್ ಸಮಸ್ಯೆಗಳ ಪರಿಶೀಲನೆ, ವ್ಯವಸ್ಥೆಯ ಒಟ್ಟು ಆರೋಗ್ಯ ಮೌಲ್ಯಮಾಪನ ಸೇರಿದಂತೆ ಹಲವು ಉಚಿತ ಸೇವೆಗಳು ಒದಗಿಸಲಾಗುತ್ತವೆ.

## 460 ಕೋಟಿ ರೂ. ಹೂಡಿಕೆಗೆ ಸಿದ್ಧತೆ

ಬೆಂಗಳೂರು: ಭಾರತದ 60 ಶತಕೋಟಿ ಮೌಲ್ಯದ ಹೋಮ್ ಸರ್ವಿಸ್ ಮಾರುಕಟ್ಟೆಯಲ್ಲಿ ಸ್ನ್ಯಾಬಿಟ್ ಭಾರೀ ಹೆಜ್ಜೆ ಇಟ್ಟಿದೆ. ಕ್ವಿಕ್ ಹೋಮ್ ಸರ್ವಿಸ್ ಕ್ಷೇತ್ರದಲ್ಲಿ ವೇಗವಾಗಿ ಬೆಳೆಯುತ್ತಿರುವ ಈ ಸಂಸ್ಥೆ ಸೀರೀಸ್ ಡಿ ಹಂತದಲ್ಲಿ 56 ಮಿಲಿಯನ್ (ಸುಮಾರು 460 ಕೋಟಿಗೂ ಹೆಚ್ಚು) ಹೂಡಿಕೆ ಸಂಗ್ರಹಿಸಿದ್ದು, ಕಂಪನಿಯ ವಿಸ್ತರಣಾ ಯೋಜನೆಗಳಿಗೆ ಮತ್ತಷ್ಟು ಬಲ ತುಂಬಿದೆ.



ಈ ಹೂಡಿಕೆ ಸುತ್ತಿಗೆ ಸುಸ್ಥೆಹನ್ನಾ ವೆಂಚರ್ ಕ್ಯಾಪಿಟಲ್, ಮಿರೆ ಅಸೆಟ್ ವೆಂಚರ್ ಇನ್ವೆಸ್ಟ್ಮೆಂಟ್ಸ್ ಯುನಿಕಾರ್ನ್ ಗ್ರೋತ್ ಫಂಡ್ ಮತ್ತು ಬರ್ಟೆಲ್ಸ್ಮನ್ ಇಂಡಿಯಾ ಇನ್ವೆಸ್ಟ್ಮೆಂಟ್ಸ್ ಜಂಟಿಯಾಗಿ ನೇತೃತ್ವ ವಹಿಸಿವೆ. ಈ ಹೊಸ ಹೂಡಿಕೆಯೊಂದಿಗೆ ಸ್ನ್ಯಾಬಿಟ್ ಇದುವರೆಗೆ ಒಟ್ಟು 112 ಮಿಲಿಯನ್ ಬಂಡವಾಳವನ್ನು ಕ್ರೋಢೀಕರಿಸಿದೆ. ಕಳೆದ 15 ತಿಂಗಳಲ್ಲಿ ಇದು ನಾಲ್ಕನೇ ಬಾರಿ ನಿಧಿ ಸಂಗ್ರಹಿಸಿರುವುದು ಕಂಪನಿಯ ವೇಗದ ಬೆಳವಣಿಗೆಯನ್ನು ತೋರಿಸುತ್ತದೆ.

ಪ್ರಸ್ತುತ ಸ್ನ್ಯಾಬಿಟ್ ಬೆಂಗಳೂರು, ಮುಂಬೈ, ದೆಹಲಿ ಎನ್‌ಸಿಆರ್, ಪುಣೆ ಮತ್ತು ಹೈದರಾಬಾದ್ ಸೇರಿ ಐದು ಪ್ರಮುಖ ನಗರಗಳ 140 ಮೈಕ್ರೋ–ಮಾರುಕಟ್ಟೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಪ್ರತಿದಿನ 40,000ಕ್ಕೂ ಹೆಚ್ಚು ಸೇವೆಗಳನ್ನು ಒದಗಿಸುತ್ತಿರುವ ಸಂಸ್ಥೆ, 2026ರ ಮಾರ್ಚ್ ತಿಂಗಳಲ್ಲೇ 10 ಲಕ್ಷಕ್ಕೂ ಅಧಿಕ ಆರ್ಡರ್‌ಗಳನ್ನು ಪೂರೈಸಿ ಹೊಸ ಮೈಲಿಗಲ್ಲು ಸಾಧಿಸಿದೆ.


ಸಂಸ್ಥೆಯ ಪ್ರಮುಖ ಬಲವೆಂದರೆ ಅದರ 15,000ಕ್ಕೂ ಹೆಚ್ಚು ಪರಿಣಿತ ಸಿಬ್ಬಂದಿ ಬಳಗವಾಗಿದ್ದು, ಇವರಲ್ಲಿ ಬಹುಪಾಲು ಮಹಿಳೆಯರು ಎಂಬುದು ಗಮನಾರ್ಹ ಸಂಗತಿ.

ಮಹಿಳಾ ಉದ್ಯೋಗಾವಕಾಶಗಳನ್ನು ಸೃಷ್ಟಿಸುವತ್ತ ಕಂಪನಿ ವಿಶೇಷ ಗಮನ ಹರಿಸಿದೆ.

# ಸಂಸದ ತೇಜಸ್ವಿ ಸೂರ್ಯ ಅವರಿಂದ ಶ್ರದ್ಧಾ ಕಣ್ಣಿನ ಆಸ್ಪತ್ರೆ ಉದ್ಘಾಟನೆ

ಬೆಂಗಳೂರು

ನಗರದಲ್ಲಿ ಸಮುದಾಯ ಆರೋಗ್ಯ ಸೇವೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿ, ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರು ಪದ್ಮನಾಭನಗರದಲ್ಲಿ 'ಶ್ರದ್ಧಾ ಕಣ್ಣಿನ ಆಸ್ಪತ್ರೆ'ಯನ್ನು ಉದ್ಘಾಟಿಸಿದರು. ನೇತ್ರಧಾಮ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆಗಳ ಲಾಭರಹಿತ ಅಂಗಸಂಸ್ಥೆಯಾದ ಶ್ರದ್ಧಾ ಐ ಕೇರ್ ಟ್ರಸ್ಟ್ ಈ ಕೇಂದ್ರವನ್ನು ಸ್ಥಾಪಿಸಿದೆ. ಸೌಲಭ್ಯವಂಚಿತ ಸಮುದಾಯಗಳಿಗೆ ಕೈಗೆಟುಕುವ ದರದಲ್ಲಿ ಸಕಾಲಿಕ ಕಣ್ಣಿನ ಚಿಕಿತ್ಸೆ ನೀಡುವುದು ಮತ್ತು ತಡೆಗಟ್ಟಬಹುದಾದ ದೃಷ್ಟಿ ದೋಷಗಳನ್ನು ನಿವಾರಿಸುವುದು ಈ



ಕೇಂದ್ರದ ಪ್ರಮುಖ ಗುರಿಯಾಗಿದೆ.

ಉದ್ಘಾಟನಾ ಸಮಾರಂಭದಲ್ಲಿ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಪ್ರೊ. ಡಾ. ಶ್ರೀ ಗಣೇಶ್, ಟ್ರಸ್ಟಿ ಡಾ. ಸುಮನ್ ಶ್ರೀ ಆರ್ ಹಾಗೂ ಮುಖ್ಯ ವೈದ್ಯಕೀಯ ಅಧಿಕಾರಿ ಡಾ. ಸುಶ್ಮಿತಾ ಶ್ರೀಗಣೇಶ್ ಸೇರಿದಂತೆ ಹಲವು ಗಣ್ಯರು ಮತ್ತು ದಾನಿಗಳು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಸದ ತೇಜಸ್ವಿ ಸೂರ್ಯ ಅವರು, ನೇತ್ರಧಾಮ ಸಂಸ್ಥೆಯು ಶ್ರದ್ಧಾ ಟ್ರಸ್ಟ್ ಮೂಲಕ ಕಳೆದ ಕೆಲವು ವರ್ಷಗಳಲ್ಲಿ ಕರ್ನಾಟಕದಾದ್ಯಂತ ಆರ್ಥಿಕವಾಗಿ ಹಿಂದುಳಿದ ವರ್ಗಗಳ ರೋಗಿಗಳಿಗೆ ತೊಂಬತ್ತಾರು ಸಾವಿರಕ್ಕೂ ಹೆಚ್ಚು ಉಚಿತ ಕಣ್ಣಿನ ಶಸ್ತ್ರಚಿಕಿತ್ಸೆಗಳನ್ನು ನಡೆಸಿರುವುದನ್ನು ಉಲ್ಲೇಖಿಸಿದರು.

# ಪಿಸಿ ಬಡಾವಣೆ ರೇಣುಕಾಯಲ್ಲಮ್ಮ ಕರಗಮಹೋತ್ಸವ ಸಂಪನ್ನ

ಕೋಲಾರ

ನಗರದ ಪಿ.ಸಿ.ಬಡಾವಣೆಯ ರೇಣುಕಾಯಲ್ಲಮ್ಮ ಸೇವಾ ಸಮಿತಿ ವತಿಯಿಂದ ರೇಣುಕಾ ಯಲ್ಲಮ್ಮ ದೇವಿಯ ಹೂವಿನ ಕರಗ ಮಹೋತ್ಸವ ಅದ್ದೂರಿಯಿಂದ ನಡೆದಿದ್ದು, ಕರಗದ ಪೂಜಾರಿ ಬಿ.ವಿ.ಮಂಜುನಾಥ್‌ರ ಅಭೂತಪೂರ್ವ ನೃತ್ಯಕ್ಕೆ ಸಹಸ್ರಾರು ಮಂದಿ ಸಾಕ್ಷಿಯಾಗಿದ್ದ ಜನಸ್ತೋಮದ ಕರತಾಡನ ಮುಗಿಲು ಮುಟ್ಟಿತ್ತು.

ಶುಕ್ರವಾರ ರಾತ್ರಿ 8–50 ಗಂಟೆಗೆ ಕರಗ ಹೊತ್ತ ಕರಗದ ಪೂಜಾರಿ ಬೇತಮಂಗಲ ಮಂಜುನಾಥ್ ಹೊರ ಬರುತ್ತಿದ್ದಂತೆ ಗೋವಿಂದಾ, ಗೋವಿಂದಾ ಜೈಕಾರಗಳೊಂದಿಗೆ ಜನರ ಕರತಾಡನ ಮುಗಿಲು ಮುಟ್ಟಿತು.

ದೇವಾಲಯದ ಮುಂಭಾಗ ನಿರ್ಮಿಸಿದ್ದ ಸುಂದರ ವೇದಿಕೆಯಲ್ಲಿ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ನಡೆದ ವಿವಿಧ ಭಂಗಿಗಳಿಂದ ಕೂಡಿದ ಕರಗ ನೃತ್ಯ ಜನಮನ ಸೂರೆಗೊಂಡಿತು.

ಕರಗದ ಪೂಜಾರಿ ಮಂಜುನಾಥ್‌ರ ವಿವಿಧ ಭಂಗಿಗಳ ನೃತ್ಯಕ್ಕೆ ತಮಟೆ ವಾದ್ಯದ ನಾದ ಮುದ ನೀಡಿದ್ದು, ಕರಗದ ಪೂಜಾರಿ ಮಾಡಿದ ನೃತ್ಯಕ್ಕೆ ಜನರ ಕರತಾಡನ ಮುಗಿಲು ಮುಟ್ಟಿತು.



ಇದೇ ಸಂದರ್ಭದಲ್ಲಿ ಕರಗದೊಂದಿಗೆ ವಿವಿಧ ದೇವರುಗಳ ಭವ್ಯ ಪಲ್ಲಕ್ಕಿ ಮೆರವಣಿಗೆ ತಮಟೆ,ವಾದ್ಯಗಳ ವಿನಾದಕ್ಕೆ ಜನ ಕುಣಿತು ಕುಪ್ಪಳಿಸಿದರು. ಇದೇ ಮೊದಲ ಬಾರಿಗೆ ಕೇರಳದಿಂದ ಚಂಡೆ ವಾದ್ಯ, ವಿವಿಧ ದೇವರುಗಳ ವೇಷಧಾರಿಗಳು ಗಮನ ಸೆಳೆದರು.

ಈ ಬಾರಿ ಕರಗವನ್ನು ಅದ್ದೂರಿಯಾಗಿ ನಡೆಸಲು ರೇಣುಕಾ ಯಲ್ಲಮ್ಮ ದೇವಾಲಯ ಸಮಿತಿ ಸಿದ್ದತೆ ನಡೆಸಿದ್ದು, ರೇಣುಕಾ ಯಲ್ಲಮ್ಮ ದೇವಿ ಸೇರಿದಂತೆ 10ಕ್ಕೂ ಹೆಚ್ಚು ದೇವರುಗಳು ವಿದ್ಯುತ್ ದೀಪಗಳಿಂದ ಸಿದ್ದಗೊಳಿಸಿದ ಆಕೃತಿ ಮನಸೂರೆಗೊಂಡಿದ್ದು ದೇವಾಲಯದ ಮುಂಭಾಗ ನೃತ್ಯದ ನಂತರ ನಗರದ ಹಳೆ ಬಡಾವಣೆ ಸರ್ಕಾರಿ ಶಾಲೆಯ ವೇದಿಕೆ, ಸಫಲಮ್ಮ ದೇವಾಲಯದ ವೇದಿಕೆಯಲ್ಲೂ ಕರಗದ ನೃತ್ಯವನ್ನು ಸಹಸ್ರಾರು ಮಂದಿ ವೀಕ್ಷಿಸುವ ಮೂಲಕ ಕಣ್ತುಂಬಿಕೊಂಡರು.

34ನೇ ವರ್ಷದ ಕರಗ ಮಹೋತ್ಸವದ ಅಂಗವಾಗಿ ಶನಿವಾರ ಸಂಜೆ 5 ಗಂಟೆಗೆ ಅಗ್ನಿಕುಂಡ ಪ್ರವೇಶ ನಡೆದಿದ್ದು, ಇಡೀ ಟೇಕಲ್ ರಸ್ತೆ ಅಂಬೇಡ್ಕರ್ ಉದ್ಯಾನವನದಿಂದ ಬೈಪಾಸ್‌ವರೆಗೂ ವಿದ್ಯುತ್ ದೀಪಗಳಿಂದ ಝಗಮಗಿಸುತ್ತಿತ್ತು.

**ಈ ಬಾರಿ ಕರಗವನ್ನು ಅದ್ದೂರಿಯಾಗಿ ನಡೆಸಲು ರೇಣುಕಾ ಯಲ್ಲಮ್ಮ ದೇವಾಲಯ ಸಮಿತಿ ಸಿದ್ದತೆ ನಡೆಸಿದ್ದು, ರೇಣುಕಾ ಯಲ್ಲಮ್ಮ ದೇವಿ ಸೇರಿದಂತೆ 10ಕ್ಕೂ ಹೆಚ್ಚು ದೇವರುಗಳು ವಿದ್ಯುತ್ ದೀಪಗಳಿಂದ ಸಿದ್ದಗೊಳಿಸಿದ ಆಕೃತಿ ಮನಸೂರೆಗೊಂಡಿದ್ದು ದೇವಾಲಯದ ಮುಂಭಾಗ ನೃತ್ಯದ ನಂತರ ನಗರದ ಹಳೆ ಬಡಾವಣೆ ಸರ್ಕಾರಿ ಶಾಲೆಯ ವೇದಿಕೆ, ಸಫಲಮ್ಮ ದೇವಾಲಯದ ವೇದಿಕೆಯಲ್ಲೂ ಕರಗದ ನೃತ್ಯವನ್ನು ಸಹಸ್ರಾರು ಮಂದಿ ವೀಕ್ಷಿಸುವ ಮೂಲಕ ಕಣ್ತುಂಬಿಕೊಂಡರು.**

ಇದೇ ಸಂದರ್ಭದಲ್ಲಿ ದೇವಾಲಯ ಸಮಿತಿ ಸದಸ್ಯ ಹಾಗೂ ಕಲಾವಿದ ಆರ್ಮುಗಂ ಪಂಜಿನ ನೃತ್ಯ ನಡೆಸಿಕೊಟ್ಟು ರಂಜಿಸಿದರು.

ಹಸಿ ಕರಗ ಮಹೋತ್ಸವದಲ್ಲಿ ಅರ್ಚಕ ಸುರೇಶಾಚಾರ್ಯ ಪೂಜೆ ನಡೆಸಿಕೊಟ್ಟಿದ್ದು, ಕರಗದ ಪೂಜಾರಿ ಬಿ.ವಿ.ಮಂಜುನಾಥ್, ಜಿಲ್ಲಾ ಕಾಂಗ್ರೆಸ್ ಎಸ್ಸಿ ಘಟಕದ ಅಧ್ಯಕ್ಷ ಕೆ.ಜಯದೇವ್, ಪತ್ರಕರ್ತರ ಸಹಕಾರ ಸಂಘದ ಅಧ್ಯಕ್ಷ ಕೆ.ಎಸ್.ಗಣೇಶ್, ಮಾರ್ಕೊಂಡಪ್ಪ, ಗೋಪಿ,ಮೂರ್ತಿ, ಸಂತೋಷ್, ದೇವಾಲಯ ಸಮಿತಿ ಉಪಾಧ್ಯಕ್ಷ ಚಂದ್ರಪ್ರಕಾಶ್, ದೇವಾಲಯ ಸಮಿತಿ ಖಜಾಂಚಿ ಕೆ.ಎಸ್. ಮಂಜುನಾಥ್, ಕಾರ್ಯದರ್ಶಿ ಕಲಾ ರಮೇಶ್, ಉಪಕಾರ್ಯದರ್ಶಿ ವಿ.ಸುರೇಶ್, ಸಂತೋಷ್, ಆರ್ಮುಗಂ, ಟಿ.ಸಂಪತ್ ಕುಮಾರ್,ಎ.ಮಹೇಶ್, ಮೇಸ್ತ್ರಿ ಕೃಷ್ಣಪ್ಪ, ಗೋವಿಂದರಾಜು, ಸಿ.ಶ್ರೀನಿವಾಸ್, ವೆಂಕಟೇಶಪ್ಪ, ಮುತ್ತಪ್ಪ, ಗಣೇಶ್ ಹಾಗೂ ರೇಣುಕಾ ಯಲ್ಲಮ್ಮ ಮಿತ್ರಬಳಗದ ಪದಾಧಿಕಾರಿಗಳು ಹಾಗೂ ರೇಣುಕಾ ಯಲ್ಲಮ್ಮ ಮಿತ್ರಬಳಗದ ಸದಸ್ಯರು ಭಾಗವಹಿಸಿದ್ದರು.

# ರಾಜ್ಯಮಟ್ಟದ ಬ್ರಾಹ್ಮಣ ವಧು– ವರಾನ್ವೇಷಣಾ ಸಮಾವೇಶ ಹಾಗೂ ಶ್ರೀನಿವಾಸ ಕಲ್ಯಾಣೋತ್ಸವ

ಬೆಂಗಳೂರು

ಬ್ರಾಹ್ಮಣ ವಿವಿಧ ಸಂಘಟನೆಗಳು ಬೆಂಗಳೂರು, ಮಂಗಳಸೂತ್ರ ಫೌಂಡೇಶನ್, ಸಪ್ತಪದಿ ಫೌಂಡೇಶನ್ ಟ್ರಸ್ಟ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಬೆಂಗಳೂರು ಸಹಕಾರದೊಂದಿಗೆ ರಾಜ್ಯಮಟ್ಟದ ಬ್ರಾಹ್ಮಣ ವಧು–ವರಾನ್ವೇಷಣ ಸಮಾವೇಶ ಮೇ 9 ಹಾಗೂ 10ರಂದು ಹಮ್ಮಿಕೊಳ್ಳಲಾಗಿದೆ.

ಸಮಾವೇಶ ಹಾಗೂ ಕಲ್ಯಾಣ ಪ್ರಾಪ್ತಿಗಾಗಿ ಶ್ರೀನಿವಾಸ ಕಲ್ಯಾಣೋತ್ಸವವನ್ನು ಬನಶಂಕರಿ ಎರಡನೇ ಹಂತ, ಬಸವನಗುಡಿ ಯಲಿರುವ (ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ) "ಗಾಯತ್ರಿ ಭವನದಲ್ಲಿ ನಡೆಯಲಿದೆ ಎರಡು ದಿನಗಳ ಕಾಲ ಬೆಳಗ್ಗೆ 9:00 ರಿಂದ ಸಂಜೆ 5:00ರವರೆಗೆ ವಧು–ವರಾನ್ವೇಷಣಾ ಸಮಾವೇಶ ಆಯೋಜಿಸಲಾಗಿದೆ.

ಆಸಕ್ತರು 1 ಪೋಸ್ಟ್ ಕಾರ್ಡ್ ಸೈಜ್ ಫೋಟೋ 1 ಬಯೋಡೇಟಾ 1 ಜಾತಕದೊಂದಿಗೆ ಭಾಗವಹಿಸ ಬಹುದು. ಮಾಹಿತಿಗಾಗಿ 9449425536/ 8088843300 ಸಂಚಾಲಕರಾದ ಶ್ರೀನಿವಾಸ್ ರವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಬಿಸಿಲ ತಾಪಕ್ಕೆ ನಾಲ್ಕೈದು ಕೋತಿಗಳ ಸಾವು

ಬೆಂಗಳೂರು

ಪ್ರತಿ ವರ್ಷ ಬೇಸಿಗೆ ಬಂದರೆ ಸಾಕು ಇಲ್ಲಿರುವ ವಾನರ ಸೈನ್ಯಕ್ಕೆ ನೀರು, ಆಹಾರದ ಸಮಸ್ಯೆ ತಲೆದೂರುತ್ತೆ. ಕೆಲ ಕೋತಿಗಳು ಪ್ರವಾಸಿಗರ ಕೈಕಾಲು ಹಿಡಿದು ಕೊಟ್ಟ ತಿಂಡಿ ತಿಂದು ಬದುಕುತ್ತಿವೆ.

ಕೆಲವು ದಾನಿಗಳು ವಾರದಲ್ಲಿ ಎರಡ್ಮೂರು ದಿನ ಮಾರುಕಟ್ಟೆಯಿಂದ ಹಣ್ಣು, ತರಕಾರಿಗಳನ್ನ ತಂದುಕೊಡುತ್ತಾರೆ. ಇನ್ನು ಅರಣ್ಯ ಇಲಾಖೆಯು ಕಾಡು ಪ್ರಾಣಿಗಳಿಗಾಗಿ ರೂಪಿಸಿದ ಕೋಟ್ಯಂತರ ರೂ ಯೋಜನೆ ಕೇವಲ ಪುಸ್ತಕದಲ್ಲಿ ಮಾತ್ರ ಇದೆ. ಇಲ್ಲಿನ ಕೆಲವು ಪ್ರಾಣಿ ಪ್ರಿಯರು ಈ ಕೋತಿಗಳ ಪರಿಸ್ಥಿತಿಯನ್ನು ನೋಡಲಾಗದೆ ಆಗಾಗ ಮುದ್ದೆ, ತರಕಾರಿ, ಹಣ್ಣುಗಳನ್ನು ನೀಡುತ್ತಾರೆ. ಅದನ್ನು ಹೊರತು ಪಡಿಸಿದರೆ ಕೋತಿಗಳಿಗೆ ಹೊಟ್ಟೆಗೆ ತಣ್ಣೀರು ಬಟ್ಟೆನೆ ಗತಿ ಎನ್ನುವಂತ್ತಾಗಿದೆ.

# ಹಕ್ಕಿಜ್ವರ ಭೀತಿ

ಬೆಂಗಳೂರು

ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದ್ದು, ಕಲ್ಲಳ್ಳಿ, ಕೋಡಿಹಳ್ಳಿ, ಹುಣ್ಣೆನಹಳ್ಳಿ, ಬೊಮ್ಮನಹಳ್ಳಿ ಮತ್ತು ಬೈರಸಂದ್ರ ಪ್ರದೇಶದ ಜನರು ಹೆಚ್ಚು ಜಾಗ್ರತೆ ವಹಿಸುವಂತೆ ಸೂಚಿಸಿದ್ದಾರೆ. ಯಾವುದೇ ಕೋಳಿಯ ಸಾವು ಕಂಡುಬಂದಲ್ಲಿ ತಕ್ಷಣ ಅಧಿಕಾರಿಗಳಿಗೆ ಮಾಹಿತಿ ನೀಡುವಂತೆ ತಿಳಿಸಿದ್ದಾರೆ. ಜನರು ಅನಗತ್ಯ ಆತಂಕಪಡಬೇಕಾಗಿಲ್ಲ, ಆದರೆ ಮುಂಜಾಗ್ರತಾ ಕ್ರಮಗಳನ್ನು ಪಾಲಿಸಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ. ಹಕ್ಕಿಜ್ವರ ಸಂಬಂಧಿತ ಮಾಹಿತಿ ನೀಡಲು ಸಹಾಯವಾಣಿ ಕೂಡ ತೆರೆಯಲಾಗಿದೆ.

# ನಿಗದಿಗಿಂತ ಮುಂಚಿತವೇ ಮುಂಗಾರು

ಬೆಂಗಳೂರು

ಹಿಮಾಲಯದ ತಪ್ಪಲಿನ ಕೆಲವು ಭಾಗಗಳು, ಪೂರ್ವ ಕರಾವಳಿ ರಾಜ್ಯಗಳು, ಗುಜರಾತ್ ಮತ್ತು ಮಹಾರಾಷ್ಟ್ರಗಳಲ್ಲಿ ಈ ತಿಂಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಶಾಖದ ಅಲೆಯ ದಿನಗಳು ಮುಂದುವರಿಯುವ ಸಾಧ್ಯತೆಯಿದೆ ಎಂದು ಐಎಂಡಿ ತನ್ನ ಮಾಸಿಕ ಮುನ್ಸೂಚನೆಯಲ್ಲಿ ತಿಳಿಸಿದೆ.

ಮೇ ತಿಂಗಳಲ್ಲಿ ದೇಶಾದ್ಯಂತ ಸರಾಸರಿ ಮಳೆ ಸಾಮಾನ್ಯಕ್ಕಿಂತ ಹೆಚ್ಚಾಗಿರುತ್ತದೆ ಎಂದು ಇಲಾಖೆ ಗಮನಿಸಿದೆ. ಆದರೆ ಪೂರ್ವ, ಈಶಾನ್ಯ ಮತ್ತು ಪೂರ್ವ ಮಧ್ಯ ಭಾರತದ ಕೆಲವು ಭಾಗಗಳು ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗಬಹುದು. ಮೇ ನಲ್ಲಿ ದೇಶದ ಹಲವು ಭಾಗಗಳಲ್ಲಿ ಕನಿಷ್ಠ ತಾಪಮಾನವು ಸಾಮಾನ್ಯಕ್ಕಿಂತ ಹೆಚ್ಚಾಗಿರುತ್ತದೆ ಎಂದು ಹವಾಮಾನಶಾಸ್ತ್ರದ ಮಹಾನಿರ್ದೇಶಕ ಮೃತ್ಯುಂಜಯ್ ಮೊಹಾಪಾತ್ರ ಹೇಳಿದ್ದಾರೆ.

# 20ರಿಂದ ಸಾರಿಗೆ ಮುಷ್ಕರ

ಬೆಂಗಳೂರು

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಂಟಿ ಕ್ರಿಯಾ ಸಮಿತಿ ಪದಾಧಿಕಾರಿಗಳಾದ ಬಿ. ಜಯದೇವರಾಜೇ ಅರಸು, ಜ್ಯೋತಿ ಅನಂತ ಸುಬ್ಬರಾವ್, ವಿಜಯ ಭಾಸ್ಕರ್ ಎಚ್.ಎಸ್. ಮಂಜುನಾಥ್, ಗಂಡಸಿ ಸದಾನಂದಸ್ವಾಮಿ, 2024ರ ಜನವರಿ 1ರಿಂದ ಬಾಕಿಯಿರುವ ವೇತನ ಪರಿಷ್ಕರಣೆ ಬೇಡಿಕೆಯನ್ನು ಜಾರಿಗೆ ತರಬೇಕು. ನಿವೃತ್ತ ನೌಕರರಿಗೆ ಬಾಕಿ ಇರುವ 12 ತಿಂಗಳ ವೇತನವನ್ನು ಪಾವತಿಸಬೇಕು. 26 ತಿಂಗಳ ಬಾಕಿ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ, 2020ರಲ್ಲಿ ಕೋವಿಡ್ ಅವಧಿಯಲ್ಲಿ ಸೇವೆಯಲ್ಲಿದ್ದ ಸಿಬ್ಬಂದಿಗೆ ಪ್ರೋತ್ಸಾಹಧನ ನೀಡಬೇಕು. 2022ರ ಜುಲೈ 1ರಿಂದ ಬಾಕಿಯಿರುವ ಶೇ.31 ತುಟ್ಟಿ ಭತ್ಯೆಯನ್ನು ಮರು ವೇತನದಲ್ಲಿ ವಿಲೀನಗೊಳಿಸಿ ಬಾಕಿ ಹಣ ಪಾವತಿಸಬೇಕು.

ಸಾರಿಗೆ ನಿಗಮಗಳ ಸಿಬ್ಬಂದಿಗೆ ಸರ್ಕಾರಿ ನೌಕರರ ಸ್ಥಾನಮಾನ ನೀಡಬೇಕು ಎಂಬ ಪ್ರಮುಖ ಬೇಡಿಕೆಯನ್ನು ಕೂಡ ಜಂಟಿ ಕ್ರಿಯಾ ಸಮಿತಿ ಮುಂದಿಟ್ಟಿದೆ ಎಂದರು.

ಅಲ್ಲದೆ, ನಾಲ್ಕು ನಿಗಮಗಳ ನೌಕರರಿಗೆ 4 ವರ್ಷಕ್ಕೊಮ್ಮೆ 7ನೇ ವೇತನ ಆಯೋಗದ ಮಾದರಿಯಲ್ಲಿ ಶೇ.27.5ರ ವೇತನ ಹೆಚ್ಚಳ ನೀಡಬೇಕು.

ಈ ಕುರಿತು ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಮುಷ್ಕರ ಅನಿವಾರ್ಯವಾಗಿದೆ ಎಂದು ಎಂದು ತಿಳಿಸಿದರು.

# ಆಹಾರ ಪದ್ಧತಿ ಅನುಸರಿಸುವುದು ಅತ್ಯಂತ ಅಗತ್ಯ

ಬೆಂಗಳೂರು

ಬೇಸಿಗೆ ಆರಂಭವಾಗುತ್ತಿದ್ದಂತೆ ಆರೋಗ್ಯ ಕಾಪಾಡಿಕೊಳ್ಳಲು ಸರಿಯಾದ ಆಹಾರ ಪದ್ಧತಿ ಅನುಸರಿಸುವುದು ಅತ್ಯಂತ ಅಗತ್ಯವಾಗಿದೆ. ಈ ಸಮಯದಲ್ಲಿ ಫಿಟ್ನೆಸ್ ಕಾಪಾಡಿಕೊಳ್ಳಲು ವ್ಯಾಯಾಮದ ಜೊತೆಗೆ ಪ್ರೋಟೀನ್ ಸಮೃದ್ಧ ಆಹಾರ ಸೇವನೆ ಕೂಡ ಮಹತ್ವದ ಪಾತ್ರ ವಹಿಸುತ್ತದೆ. ಸಮತೋಲನಯುತ ಆಹಾರ ದೇಹದ ತೂಕ ನಿಯಂತ್ರಣ, ಶಕ್ತಿ ನಿರ್ವಹಣೆ ಮತ್ತು ಸ್ನಾಯುಗಳ ಬೆಳವಣಿಗೆಗೆ ಸಹಾಯಕವಾಗುತ್ತದೆ ಎಂದು ಪೌಷ್ಠಿಕ ತಜ್ಞರು ಸಲಹೆ ನೀಡುತ್ತಾರೆ.



ಬೆಳಗಿನ ಉಪಾಹಾರದಲ್ಲಿ ಪ್ರೋಟೀನ್ ಹಾಗೂ ಆರೋಗ್ಯಕರ ಕೊಬ್ಬುಗಳಿರುವ ಆಹಾರವನ್ನು ಸೇರಿಸಿಕೊಳ್ಳುವುದು ಉತ್ತಮ. ಕ್ಯಾಲಿಫೋರ್ನಿಯಾ ಆಲ್ಮಂಡ್‌ಗಳು ವಿಟಮಿನ್ ಇ, ಮೆಗ್ನೀಷಿಯಂ ಹಾಗೂ ಉತ್ತಮ ಕೊಬ್ಬುಗಳನ್ನು ಒಳಗೊಂಡಿದ್ದು, ದೇಹಕ್ಕೆ ಶಕ್ತಿಯನ್ನು ನೀಡುತ್ತವೆ. ಇವುಗಳನ್ನು ಬೇಯಿಸಿದ ಮೊಟ್ಟೆಗಳೊಂದಿಗೆ ಸೇವಿಸಿದರೆ ಪ್ರೋಟೀನ್ ಪ್ರಮಾಣ ಹೆಚ್ಚಾಗಿ ದೇಹಕ್ಕೆ ಅಗತ್ಯ ಪೌಷ್ಠಿಕಾಂಶ ಲಭ್ಯವಾಗುತ್ತದೆ. ಈ ರೀತಿಯ ಉಪಾಹಾರ ದಿನದ ಆರಂಭಕ್ಕೆ ಶಕ್ತಿಯನ್ನು ಒದಗಿಸುವುದರೊಂದಿಗೆ ಹಸಿವು ನಿಯಂತ್ರಣದಲ್ಲಿರಲು ಸಹಕಾರಿಯಾಗಿದೆ.

ಮಧ್ಯಾಹ್ನದ ಊಟದಲ್ಲಿ ಗ್ರಿಲ್ಡ್ ಚಿಕನ್ ಬ್ರೆಸ್ಟ್ ಸಲಾಡ್ ಉತ್ತಮ ಆಯ್ಕೆಯಾಗಿದ್ದು, ಇದರಲ್ಲಿ ಮಿಶ್ರ ಹಸಿರು ತರಕಾರಿಗಳು, ಚೆರಿ ಟೊಮ್ಯಾಟೊ ಹಾಗೂ ಸೌತೆಕಾಯಿ ಸೇರಿಸಬಹುದು.

ಈ ಸಂಯೋಜನೆ ದೇಹಕ್ಕೆ ಅಗತ್ಯವಾದ ನಾರಿನಾಂಶ, ಪ್ರೋಟೀನ್ ಹಾಗೂ ನೀರಿನ ಅಂಶವನ್ನು ಒದಗಿಸುತ್ತದೆ. ಹೀಗಾಗಿ ಮಧ್ಯಾಹ್ನದ ಸಮಯದಲ್ಲಿ ದೇಹ ಹಗುರವಾಗಿದ್ದು, ಶಕ್ತಿಯುತವಾಗಿರಲು ನೆರವಾಗುತ್ತದೆ.

# ಮೂರು ಹೊಸ ಟ್ರಾಕ್ಟರ್ ಮಾದರಿಗಳ ಬಿಡುಗಡೆ

ಬೆಂಗಳೂರು

ಕೃಷಿ ಯಂತ್ರೋಪಕರಣಗಳ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಎಸ್ಕಾರ್ಟ್ಸ್ ಕುಬೋಟಾ ಲಿಮಿಟೆಡ್ ಕಂಪನಿ ತನ್ನ ಜನಪ್ರಿಯ ಡಿಜಿಟ್ರಾಕ್ ಶ್ರೇಣಿಯನ್ನು ಮತ್ತಷ್ಟು ವಿಸ್ತರಿಸಿ ಮೂರು ಹೊಸ ಟ್ರಾಕ್ಟರ್ ಮಾದರಿಗಳನ್ನು ಬಿಡುಗಡೆ ಮಾಡಿದೆ. ಈ ಮೂಲಕ ಈಗಾಗಲೇ ಎರಡು ಮಾದರಿಗಳಲ್ಲಿ ಲಭ್ಯವಿದ್ದ ಡಿಜಿಟ್ರಾಕ್ ಸರಣಿಯನ್ನು ಸಮಗ್ರ ಐದು ಮಾದರಿಗಳ ಸರಣಿಯಾಗಿ ರೂಪಿಸಲಾಗಿದೆ.

ಪವರ್ ಟ್ರಾಕ್ ಬ್ರಾಂಡ್ ಅಡಿಯಲ್ಲಿ ಬಿಡುಗಡೆಯಾದ ಈ ಡಿಜಿಟ್ರಾಕ್ ಸರಣಿಯು 45–55 ಎಚ್.ಪಿ. ಶ್ರೇಣಿಯನ್ನು ಒಳಗೊಂಡಿದ್ದು, ರೈತರ ಅಗತ್ಯಗಳನ್ನು ಮನಗಂಡು ಸುಧಾರಿತ ಕೃಷಿ ಕಾರ್ಯಗಳು ಹಾಗೂ ಹೆಚ್ಚಿನ ಹಾಲೇಜ್ ಕಾರ್ಯಗಳಿಗೆ ಅನುಗುಣವಾಗಿ ವಿನ್ಯಾಸಗೊಳಿಸಲಾಗಿದೆ. ವಿಶೇಷವಾಗಿ ಈ ಬಾರಿ ನಾಲ್ಕು ಚಕ್ರ ಚಾಲಿತ ಮಾದರಿಯನ್ನು ಕೂಡ ಸೇರಿಸಲಾಗಿದ್ದು, ಕಠಿಣ ಭೂಪ್ರದೇಶಗಳಲ್ಲಿ ಕಾರ್ಯಕ್ಷಮತೆ ಹೆಚ್ಚಿಸಲು ನೆರವಾಗಲಿದೆ.

ಕಂಪನಿಯು ಭಾರತದಲ್ಲಿ ಕುಬೋಟಾ, ಫಾರ್ಮ್‌ಟ್ರಾಕ್ ಮತ್ತು ಪವರ್ ಟ್ರಾಕ್ ಎಂಬ ಮೂರು ಪ್ರಮುಖ ಬ್ರಾಂಡ್‌ಗಳ ಮೂಲಕ ಪ್ರೀಮಿಯಂ, ಎಂಟ್ರಿ–ಪ್ರೀಮಿಯಂ ಹಾಗೂ ಮೌಲ್ಯಾಧಾರಿತ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಡಿಜಿಟ್ರಾಕ್ ಸರಣಿಯು ಪವರ್ ಟ್ರಾಕ್ ಬ್ರಾಂಡ್ ಅಡಿಯಲ್ಲಿ ಒಳಗೊಂಡಿದೆ. 2025ರ ಫೆಬ್ರವರಿಯಿಂದ ಈವರೆಗೆ ಕಂಪನಿಯ ನಾಲ್ಕನೇ ಪ್ರಮುಖ ಟ್ರಾಕ್ಟರ್ ಬಿಡುಗಡೆಯಾಗಿ ಇದು ಗಮನ ಸೆಳೆಯುತ್ತಿದೆ. ಈ ಸರಣಿಯಲ್ಲಿ ಈಗಾಗಲೇ ಜನಪ್ರಿಯವಾಗಿದ್ದ ಪಿಪಿ 56ಐ ಮತ್ತು ಪಿಪಿ 43ಐ ಮಾದರಿಗಳಿಗೆ ರೈತರಿಂದ ಉತ್ತಮ ಪ್ರತಿಕ್ರಿಯೆ ದೊರೆತಿದ್ದು, ಇದೀಗ ಹೊಸ ಸೇರ್ಪಡೆಗಳಾಗಿ ಡಿಜಿಟ್ರಾಕ್ ಪಿಪಿ 46ಐ ನಾಲ್ಕು ಚಕ್ರ ಚಾಲಿತ, ಡಿಜಿಟ್ರಾಕ್ ಪಿಪಿ 43ಐ ಪ್ಲಸ್ ಮತ್ತು ಡಿಜಿಟ್ರಾಕ್ ಪಿಪಿ 41ಐ ಬಿಡುಗಡೆಯಾಗಿವೆ. ವಿಶೇಷವಾಗಿ ಡಿಜಿಟ್ರಾಕ್ ಪಿಪಿ 43ಐ ಪ್ಲಸ್ ಮಾದರಿ ಗಂಟೆಗೆ 39.9 ಕಿಲೋಮೀಟರ್ ವೇಗವನ್ನು ಹೊಂದಿದ್ದು, ತನ್ನ ವರ್ಗದಲ್ಲೇ ಅತ್ಯುತ್ತಮ ವೇಗದ ಟ್ರಾಕ್ಟರ್ ಆಗಿ ಹೊರಹೊಮ್ಮಿದೆ.




ಈ ಎಲ್ಲಾ ಐದು ಮಾದರಿಗಳು ದೊಡ್ಡ ಸಾಮರ್ಥ್ಯದ ಎಂಜಿನ್‌ಗಳು, ವಿಶಾಲ ಟೈರ್‌ಗಳು, ಸೈಡ್ ಶಿಫ್ಟ್ ಗೇರ್ ವ್ಯವಸ್ಥೆ, 12 ಫಾರ್ವರ್ಡ್ ಮತ್ತು 3 ರಿವರ್ಸ್ ಕಾನ್ಸ್ಟಂಟ್ ಮೆಷ್ ಗೇರ್ ಬಾಕ್ಸ್, ಸ್ವತಂತ್ರ ಪಿಟಿಓ ಹಾಗೂ 2000 ಕೆಜಿ ಸಾಮರ್ಥ್ಯದ ಹೆವಿ ಹೈಡ್ರಾಲಿಕ್ ಲಿಫ್ಟ್ ಸೇರಿದಂತೆ ಆಧುನಿಕ ತಾಂತ್ರಿಕ ವೈಶಿಷ್ಟ್ಯಗಳನ್ನು ಹೊಂದಿವೆ. ಇವು ಕೃಷಿಯ ವಿವಿಧ ಹಂತಗಳಿಗೆ ಅಗತ್ಯವಾದ ಸೂಪರ್ ಸೀಡರ್, ರೀಪರ್, ರಿವರ್ಸಿಬಲ್ ಎಂಬಿ ಪ್ಲೋ ಮತ್ತು ಲೇಸರ್ ಲೆವೆಲ್ಲರ್ ಸೇರಿದಂತೆ ಅನೇಕ ಉಪಕರಣಗಳಿಗೆ ಸಹ ಬೆಂಬಲ ನೀಡುತ್ತವೆ.

# 350 ಮತ್ತು ಇವಿಯೇಟರ್ 350ಎಲ್ ಪ್ಲಸ್ ಪರಿಚಯ

ಬೆಂಗಳೂರು

ಮುರುಗಪ್ಪ ಸಮೂಹದ ಕ್ಲೀನ್ ಮೊಬಿಲಿಟಿ ಬ್ರ್ಯಾಂಡ್ ಆಗಿರುವ ಮೊಂಟ್ರ ಎಲೆಕ್ಟ್ರಿಕ್ ತನ್ನ ಎಲೆಕ್ಟ್ರಿಕ್ ಸಣ್ಣ ಟ್ರಕ್ ಶ್ರೇಣಿಯನ್ನು ವಿಸ್ತರಿಸಿ, ಇವಿಯೇಟರ್ 350 ಮತ್ತು ಇವಿಯೇಟರ್ 350ಎಲ್ ಪ್ಲಸ್ ಎಂಬ ಎರಡು ಹೊಸ ರೂಪಾಂತರಗಳನ್ನು ಪರಿಚಯಿಸಿದೆ. ಈ ಮೂಲಕ ಕಂಪನಿ ತನ್ನ ಇಎಸ್‌ಸಿವಿ ಪೋರ್ಟ್‌ಫೋಲಿಯೊವನ್ನು ಕಾರ್ಯತಂತ್ರದ ದೃಷ್ಟಿಯಿಂದ ಮತ್ತಷ್ಟು ಬಲಪಡಿಸಿದೆ.

ಹೊಸ ಇವಿಯೇಟರ್ 350 (32 ಕಿಲೋವಾಟ್ ಘಂಟೆ) ಮಾದರಿ ಕಡಿಮೆ ದೂರದ ನಗರ ಲಾಜಿಸ್ಟಿಕ್ಸ್ ಅಗತ್ಯಗಳಿಗೆ ಅನುಗುಣವಾಗಿ ವಿನ್ಯಾಸಗೊಳಿಸಲ್ಪಟ್ಟಿದ್ದು, ದಿನಕ್ಕೆ ಸುಮಾರು 140 ಕಿಲೋಮೀಟರ್ ವ್ಯಾಪ್ತಿಯನ್ನು ಒದಗಿಸುತ್ತದೆ. ಲಾಸ್ಟ್ ಮೈಲ್ ಡೆಲಿವರಿ ಕಾರ್ಯಗಳಿಗೆ ಇದು ಅತ್ಯಂತ ಸೂಕ್ತವಾಗಿದ್ದು, ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಕಾರ್ಯಕ್ಷಮತೆಯನ್ನು ನೀಡುವಂತೆ ರೂಪಿಸಲಾಗಿದೆ.

ಇನ್ನೊಂದೆಡೆ, ಇವಿಯೇಟರ್ 350ಎಲ್ ಪ್ಲಸ್ (50



ಕಿಲೋವಾಟ್ ಘಂಟೆ) ದೀರ್ಘ ದೂರದ ನಗರ ಸಾರಿಗೆಗಾಗಿ ಅಭಿವೃದ್ಧಿಪಡಿಸಲಾಗಿದ್ದು, 300 ಕಿಲೋಮೀಟರ್‌ಗಿಂತ ಹೆಚ್ಚಿನ ಪ್ರಮಾಣೀಕೃತ ಶ್ರೇಣಿಯನ್ನು ಮತ್ತು 200 ಕಿಲೋಮೀಟರ್‌ಗಿಂತ ಹೆಚ್ಚು ನೈಜ ಬಳಕೆ ವ್ಯಾಪ್ತಿಯನ್ನು ಒದಗಿಸುತ್ತದೆ. ಅಂತರನಗರ ಲಾಜಿಸ್ಟಿಕ್ಸ್, ಶೀತಗೃಹ ಸಾರಿಗೆ ಹಾಗೂ ಪುರಸಭಾ ಸೇವೆಗಳಂತಹ ಹೆಚ್ಚು ಬೇಡಿಕೆಯ ಬಳಕೆಗಳಿಗೆ ಇದು ಸೂಕ್ತವಾಗಿದೆ.

ಈ ವಿಸ್ತರಣೆ ಕಂಪನಿಯು ಸಂಗ್ರಹಿಸಿರುವ ನೈಜ ಜಗತ್ತಿನ ಡೇಟಾ ಆಧಾರಿತವಾಗಿದೆ. ಮೊಂಟ್ರ ಎಲೆಕ್ಟ್ರಿಕ್ ಈಗಾಗಲೇ 600ಕ್ಕೂ ಹೆಚ್ಚು ವಾಹನಗಳಿಂದ ಒಟ್ಟು 65 ಲಕ್ಷ ಕಿಲೋಮೀಟರ್‌ಗಿಂತ ಹೆಚ್ಚಿನ ಕಾರ್ಯಾಚರಣಾ ಮಾಹಿತಿಯನ್ನು ಸಂಗ್ರಹಿಸಿದ್ದು, ಅದರ ಆಧಾರದ ಮೇಲೆ ಬಳಕೆದಾರರ ಅಗತ್ಯಗಳನ್ನು ಇನ್ನಷ್ಟು ಚೆನ್ನಾಗಿ ಅರ್ಥಮಾಡಿಕೊಂಡಿದೆ. ಇದರಿಂದ ವಿಭಿನ್ನ ಬಳಕೆಗಳಿಗೆ ತಕ್ಕಂತೆ ವಿದ್ಯುತ್ ವಾಣಿಜ್ಯ ವಾಹನಗಳ ವಿನ್ಯಾಸ ಮತ್ತು ಕಾರ್ಯಕ್ಷಮತೆಯನ್ನು ಸುಧಾರಿಸಲು ಸಾಧ್ಯವಾಗಿದೆ.

ಇದಕ್ಕೂ ಮೊದಲು ಬಿಡುಗಡೆಯಾದ 40 ಕಿಲೋವಾಟ್ ಘಂಟೆ ಸಾಮರ್ಥ್ಯದ ಇವಿಯೇಟರ್ ಮಾದರಿ ಈಗಾಗಲೇ ಮಾರುಕಟ್ಟೆಯಲ್ಲಿ ಉತ್ತಮ ಪ್ರತಿಕ್ರಿಯೆ ಪಡೆದಿದ್ದು, ಹೊಸ 32 ಕಿಲೋವಾಟ್ ಘಂಟೆ ಮಾದರಿ ಅದನ್ನು ಮತ್ತಷ್ಟು ಕೈಗೆಟುಕುವದಾಗಿಸಿದೆ.

# ಸುರೇಶ್‌ಬಾಬು, ಅನಿಲ್ ತಂಡಕ್ಕೆ ಗೆಲುವು

ಬೆಂಗಳೂರು

ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆ ಫಲಿತಾಂಶ ಪ್ರಕಟಗೊಂಡಿದ್ದು, ನೌಕರರ ಸಂಘದ ನಿಕಟಪೂರ್ವ ಅಧ್ಯಕ್ಷ ಜಿ.ಸುರೇಶ್ ಬಾಬು, ಶಿಕ್ಷಕರ ಗೆಳೆಯರ ಬಳಗದ ಅಧ್ಯಕ್ಷ ಕೋರಗಂಡಹಳ್ಳಿ ನಾರಾಯಣಸ್ವಾಮಿ, ಅನಿಲ್ ಕುಮಾರ್ ನೇತೃತ್ವದ ತಂಡ ಎಲ್ಲಾ 20 ಸ್ಥಾನಗಳಲ್ಲೂ ಜಯಭೇರಿ ಬಾರಿಸುವ ಮೂಲಕ ಹಾಲಿ ನೌಕರರ ಸಂಘದ ಅಧ್ಯಕ್ಷ ಅಜಯ್‌ಕುಮಾರ್ ಬಣಕ್ಕೆ ತೀವ್ರ ಹಿನ್ನಡೆಯಾಗಿದೆ.

ಚುನಾವಣೆ ನಡೆದ ಎಲ್ಲಾ 20 ಸ್ಥಾನಗಳನ್ನು ತಮ್ಮದಾಗಿಸಿಕೊಂಡಿರುವ ಅನಿಲ್‌ಕುಮಾರ್ ಹಾಗೂ ಶಿಕ್ಷಕ ಗೆಳೆಯರ ಬಳಗದ ತಂಡ ಗೆಲುವಿನ ನಗೆ ಬೀರಿದ್ದು, ಶಿಕ್ಷಕ ಗೆಳೆಯರ ಬಳಗದ ಅಧ್ಯಕ್ಷ ನಾರಾಯಣಸ್ವಾಮಿ ಹರ್ಷ ವ್ಯಕ್ತಪಡಿಸಿದ್ದಾರೆ.

ಚುನಾವಣೆಯಲ್ಲಿ ಗೆಲುವು ಸಾಧಿಸಿದವರೆಂದರೆ ನೌಕರರ ಸಂಘದ ಹಾಲಿ ನಿರ್ದೇಶಕರೂ ಆಗಿರುವ ಎಸ್.ಬಿ ವೆಂಕಟಾಚಲಪತಿ ಗೌಡ – 594 ಮತ ಹಾಗೂ ಶಿಕ್ಷಕರ ಸಂಘದ ಮಾಜಿ ಜಿಲ್ಲಾಧ್ಯಕ್ಷರೂ ಆಗಿರುವ ಅನಿಲ್ ಕುಮಾರ್ – 697 ಮತ ಪಡೆದು ಗೆಲುವು ದಾಖಲಿಸಿದ್ದಾರೆ.

ಉಳಿದಂತೆ ಅಶ್ವಥಪ್ಪ – 606 ಮತ, ಅಯಾಜ್ ಅಹಮದ್ – 531 ಮತ , ಕೃಷ್ಣಪ್ಪ ಎನ್ – 620 ಮತ, ಮುನಿರಾಜು .ಸಿ –628 ಮತ , ನಾರಾಯಣಸ್ವಾಮಿ .ಸಿ – 658 ಮತ, ನಾರಾಯಣಸ್ವಾಮಿ .ಎಸ್ – 596 ಮತ, ಸತೀಶ .ಬಿ – 616 ಮತ, ಶಿವರಾಜ .ಕೆ – 568 ಮತ, ಸೋಮಶೇಖರ ವಿ – 590 ಮತ, ಸೊಣ್ಣೇಗೌಡ .ಕೆ.ಆರ್ – 621 ಮತ ಹಾಗೂ ಸುಬ್ರಮಣ್ಯಂ .ಎಂ.ವಿ. – 586 ಮತ ಪಡೆದು ಅಭೂತಪೂರ್ವ ಗೆಲುವು ಸಾಧಿಸಿದ್ದಾರೆ.

ಮಹಿಳಾ ಕ್ಷೇತ್ರದಿಮದ ವಿಜೇತ ಪದಾಧಿಕಾರಿಗಳೆಂದರೆ ಶಿಕ್ಷಕರಾದ ವಿ.ಭಾಗ್ಯಲಕ್ಷ್ಮಮ್ಮ, ಕೆ.ಭಾಗ್ಯಮ್ಮ, ಕೆ.ಭಾರತಿ, ಎಸ್.ಜಯಲಕ್ಷ್ಮಿ, ರೇಷ್ಮತಲಾಖ್ ಖಾನಂ, ಆರ್.ಸವಿತಾ, ವಿ.ಮಂಜುಳಾ ಆಯ್ಕೆಯಾಗಿದ್ದಾರೆ.

ಎಲ್ಲಾ 20 ಸ್ಥಾನಗಳು ಶಿಕ್ಷಕ ಗೆಳೆಯರ ಬಳಗ, ನೌಕರರ ಸಂಘದ ನಿಕಟಪೂರ್ವ ಅಧ್ಯಕ್ಷ ಜಿ.ಸುರೇಶ್‌ಬಾಬು ಹಾಗೂ ಅನಿಲ್ ಕುಮಾರ್ ಬಣದ ಪಾಲಾಗಿದೆ.

ಕಳೆದ ಚುನಾವಣೆಯಲ್ಲೂ ಜಿ.ಸುರೇಶ್‌ಬಾಬು ನೇತೃತ್ವದ ಬಣ 20 ಸ್ಥಾನಗಳಲ್ಲಿ ಗೆಲುವು ಸಾಧಿಸಿತ್ತು. ಈ ಬಾರಿ ಕೆಲವು ಮುಖಂಡರು ನಿಷ್ಠೆ ಬದಲಿಸಿದ್ದು, ಬೇರೆ ಬಣದಲ್ಲಿ ಗುರುತಿಸಿಕೊಂಡಿದ್ದರು. ಆದರೆ ಈ ಬಾರಿಯೂ ಶಿಕ್ಷಕ ಗೆಳೆಯರ ಬಳಗ,ಅನಿಲ್ ಕುಮಾರ್,ಜಿ.ಸುರೇಶ್‌ಬಾಬು ಅವರ ಪ್ರಯತ್ನದಿಂದಾಗಿ ಮತ್ತೆ ಎಲ್ಲಾ 20 ಸ್ಥಾನಗಳನ್ನು ಬಾಚಿಕೊಳ್ಳುವ ಮೂಲಕ ವಿರೋಧಿ ತಂಡಕ್ಕೆ ತಿರುಗೇಟು ನೀಡಿದ್ದಾರೆ.

ನೌಕರರ ಸಂಘದ ಚುನಾವಣೆಯಲ್ಲಿ ಸುರೇಶ್‌ಬಾಬು ತಂಡದಲ್ಲಿ ಗುರುತಿಸಿಕೊಂಡಿದ್ದ ನೌಕರರ ಸಂಘದ ಹಾಲಿ ನಿರ್ದೇಶಕ ವೆಂಕಟಾಚಲಪತಿಗೌಡ ಗೆಲುವು ದಾಖಲಿಸಿದ್ದರು. ಇದೀಗ ಮತ್ತೆ ಗೆಲ್ಲುವ ಮೂಲಕ ಶಿಕ್ಷಕರ ಪ್ರೀತಿಗೆ ಪಾತ್ರರಾಗಿದ್ದಾರೆ. ಈ ಕುರಿತು ಪ್ರತಿಕ್ರಿಯಿಸಿರುವ ಶಿಕ್ಷಕ ಗೆಳೆಯರ ಬಳಗದ ಅಧ್ಯಕ್ಷ ನಾರಾಯಣಸ್ವಾಮಿ, ಈ ಅಭೂತಪೂರ್ವ ಗೆಲುವಿಗೆ ಶಿಕ್ಷಕ ಗೆಳೆಯರ ಬಳಗದ ನಿರಂತರ ಶೈಕ್ಷಣಿಕ ಸೇವೆಯೂ ಕಾರಣವಾಗಿದೆ ಎಂದು ತಿಳಿಸಿದರು.

ಸರ್ಕಾರಿ ಶಾಲೆಗಳನ್ನು ಉಳಿಸುವ ನಮ್ಮ ಕಾಯಕ ಮುಂದುವರೆಯಲಿದ್ದು, ವಿವಿಧ ಕಂಪನಿಗಳ ದಾನಿಗಳ ನೆರವಿನಿಂದ ಸರ್ಕಾರಿ ಶಾಲೆಗಳ ಅಭಿವೃದ್ದಿಗೆ ಮತ್ತಷ್ಟು ಕೊಡುಗೆ ಹರಿಸುವ ಪ್ರಯತ್ನ ಮುಂದುವರೆಯಲಿದೆ ಎಂದು ತಿಳಿಸಿದರು.

ಶಿಕ್ಷಕರ ಸಂಘದ ಚುನಾವಣಾ ಫಲಿತಾಂಶ ಪ್ರಕಟಗೊಳ್ಳುತ್ತಿದ್ದಂತೆ ನೂರಾರು ಮಂದಿ ಶಿಕ್ಷಕರು ಹಾಜರಿದ್ದು ವಿಜಯೋತ್ಸವ ಆಚರಿಸಿದರು.

# ಅವ್ಯವಹಾರ: ಕೋಮುಲ್ ವಿರುದ್ಧ ಹೋರಾಟ ತೀವ್ರ

ಬೆಂಗಳೂರು

ಕೋಲಾರ ಜಿಲ್ಲಾ ಹಾಲು ಒಕ್ಕೂಟದಲ್ಲಿ ನಡೆದಿರುವ ಅವ್ಯವಹಾರ ಮತ್ತು ಅಕ್ರಮ ನೇಮಕಾತಿ ಪ್ರಕರಣದಲ್ಲಿ ಹೊಸ ಬೆಳವಣಿಗೆ ಕಂಡುಬಂದಿದ್ದು, 512 ಕೋಟಿ ಮೊತ್ತದ ಅವ್ಯವಹಾರ ನಡೆದಿದೆ ಎಂಬ ಗಂಭೀರ ಆರೋಪ ಹೊರಬಂದಿದೆ. ಅಗತ್ಯ ದಾಖಲೆಗಳನ್ನು ಒದಗಿಸದಿದ್ದರೆ ಹೈಕೋರ್ಟ್ ಮೊರೆ ಹೋಗುವುದಾಗಿ ಸಾಮಾಜಿಕ ಹೋರಾಟಗಾರರಾದ ಗೂಳಿಗಾನಹಳ್ಳಿ ನಾಗರಾಜ ಮತ್ತು ಕೆ.ಪಿ.ವೆಂಕಟಚಲಾಪತಿ ಎಚ್ಚರಿಕೆ ನೀಡಿದ್ದಾರೆ.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಒಕ್ಕೂಟದಲ್ಲಿನ ಅಕ್ರಮವನ್ನು ಸಾಬೀತುಪಡಿಸಲು ಸಿದ್ಧವಿದ್ದೇವೆ. ಆದರೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಲು ಆಡಳಿತ ಮಂಡಳಿ ಹಿಂದೇಟು ಹಾಕುತ್ತಿದೆ' ಎಂದು ದೂರಿದರು.

'ಒಕ್ಕೂಟದಲ್ಲಿ 300 ಕೋಟಿ ಅಲ್ಲ, 512 ಕೋಟಿ ಮೊತ್ತದ ಅವ್ಯವಹಾರ ನಡೆದಿದೆ. ಈ ಕುರಿತು ಸಮಗ್ರ ತನಿಖೆ ನಡೆಯಲು ಅವಕಾಶ ನೀಡಲಾಗುತ್ತಿಲ್ಲ. ಕರ್ನಾಟಕ ಲೋಕಾಯುಕ್ತ ತನಿಖೆಗೆ ಬೇಕಾದ ಸಹಕಾರವೂ ಸಿಗುತ್ತಿಲ್ಲ' ಎಂದು ಅವರು ಹೇಳಿದರು.

ಗೂಳಿಗಾನಹಳ್ಳಿ ನಾಗರಾಜ ಮಾತನಾಡಿ, 'ಒಂದು ವರ್ಷದ ಹಿಂದೆ ನೀಡಿದ ದೂರಿನ ಮೇರೆಗೆ ಲೋಕಾಯುಕ್ತ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ದಾಖಲೆ ಪರಿಶೀಲನೆ ನಡೆಸಿದ್ದಾರೆ. ನಮ್ಮ ಸಮ್ಮುಖದಲ್ಲೇ ಈ ಪ್ರಕ್ರಿಯೆ ನಡೆದಿದ್ದು, ಇದರಲ್ಲಿ ಅನೇಕ ಅಂಶಗಳು ಬೆಳಕಿಗೆ ಬಂದಿವೆ. ಈ ಹಿಂದೆ ಇ.ಡಿ ಮತ್ತು ಸಿಬಿಐಗೂ ದೂರು ಸಲ್ಲಿಸಿದ್ದೇವೆ' ಎಂದರು.



ಕೆ.ಪಿ.ವೆಂಕಟಚಲಾಪತಿ ಮಾತನಾಡಿ, 'ನೇಮಕಾತಿ ಪ್ರಕ್ರಿಯೆಯಲ್ಲಿ ಗಂಭೀರ ಅಕ್ರಮಗಳು ನಡೆದಿವೆ. 2023ರ ಸೆಪ್ಟೆಂಬರ್‌ನಲ್ಲಿ ನಡೆದ ಪರೀಕ್ಷೆಯಲ್ಲಿ ಕೆಲವು ಅಭ್ಯರ್ಥಿಗಳಿಗೆ ಅನುಕೂಲವಾಗುವಂತೆ ಓಎಂಆರ್ ಶೀಟ್‌ಗಳನ್ನು ತಿದ್ದುಪಡಿ ಮಾಡಲಾಗಿದೆ. ಒಂದೇ ರೋಲ್ ನಂಬರ್‌ನೊಂದಿಗೆ ಎರಡು ಶೀಟ್‌ಗಳನ್ನು ಸೃಷ್ಟಿಸಿ ಅಂಕಗಳನ್ನು ಬದಲಾಯಿಸಿರುವುದು ಗಮನಾರ್ಹ' ಎಂದು ಆರೋಪಿಸಿದರು.

ಅಕ್ರಮವಾಗಿ ಹುದ್ದೆ ಪಡೆದವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಅಭ್ಯರ್ಥಿಗಳು ಪಡೆದ ನಿಜವಾದ ಅಂಕಗಳನ್ನು ಬಹಿರಂಗಪಡಿಸಬೇಕು ಎಂದು ಅವರು ಒತ್ತಾಯಿಸಿದರು.

ಇದಲ್ಲದೆ, ಒಕ್ಕೂಟದ ನೌಕರರ ಸಾಮಾನ್ಯ ಕಲ್ಯಾಣ ಟ್ರಸ್ಟ್‌ನಲ್ಲಿಯೂ ಹಣದ ದುರ್ಬಳಕೆ ನಡೆದಿದೆ. ನಿರ್ದೇಶಕರು 13 ಲಕ್ಷ ಮೌಲ್ಯದ ಚಿನ್ನದ ನಾಣ್ಯಗಳನ್ನು ಪಡೆದುಕೊಂಡಿದ್ದಾರೆ. 3 ಕೋಟಿ ವೆಚ್ಚಕ್ಕೆ ಸಂಬಂಧಿಸಿದ ದಾಖಲೆಗಳೂ ಲಭ್ಯವಿಲ್ಲ ಎಂದು ಆರೋಪಿಸಿದರು.

'ಒಕ್ಕೂಟಕ್ಕೆ ಸಂಬಂಧಿಸಿದ ಪ್ರಮುಖ ದಾಖಲೆಗಳನ್ನು ಬಹಿರಂಗಪಡಿಸಿದರೆ ಅಕ್ರಮವನ್ನು ಸಂಪೂರ್ಣವಾಗಿ ಸಾಬೀತುಪಡಿಸುತ್ತೇವೆ. ಇಲ್ಲದಿದ್ದರೆ ನ್ಯಾಯಾಲಯದ ಮೆಟ್ಟಿಲೇರಲು ನಾವು ಸಿದ್ಧ' ಎಂದು ಹೋರಾಟಗಾರರು ಸ್ಪಷ್ಟಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರಮೇಶ್ ಬಾಬು ಉಪಸ್ಥಿತರಿದ್ದರು.

# ದೇವನಹಳ್ಳಿ ತಾಲೂಕು ಕಚೇರಿಯಲ್ಲಿ ಮಾಹಿತಿ ಹಕ್ಕು ಪ್ರಕ್ರಿಯೆ ಆಮೆಗತಿ: ಆಕ್ರೋಶ

ದೇವನಹಳ್ಳಿ

ಸರ್ಕಾರದ ಆಡಳಿತದಲ್ಲಿ ಪಾರದರ್ಶಕತೆ ತರಲು ಜಾರಿಗೆ ಬಂದ ಮಾಹಿತಿ ಹಕ್ಕು ಕಾಯ್ದೆಗೆ ಇಲ್ಲಿ ಬೆಲೆ ಇಲ್ಲದಂತಾಗಿದೆ ಎಂಬ ಆರೋಪಗಳು ಕೇಳಿಬರುತ್ತಿವೆ. ದೇವನಹಳ್ಳಿ ತಾಲೂಕು ಕಚೇರಿಯಲ್ಲಿ ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಅಡಿ ಅರ್ಜಿ ಸಲ್ಲಿಸಿದ ಸಾರ್ವಜನಿಕರು ಮಾಹಿತಿ ಪಡೆಯಲು ತಿಂಗಳುಗಟ್ಟಲೆ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದು, ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಅಖಿಲ ಭಾರತ ಅರ್ಚಕರ ಮತ್ತು ಪುರೋಹಿತರ ಫೆಡರೇಶನ್‌ನ ರಾಷ್ಟ್ರೀಯ ನಿರ್ದೇಶಕರಾದ ಬಿ.ಆರ್. ಗೋವರ್ಧನ್ ಪಾಣಿ ತೀವ್ರ ಅಸಮಾಧಾನ ವ್ಯಕ್ತಪಡಿಸಿ, ಕರ್ತವ್ಯ ಲೋಪ ಎಸಗುತ್ತಿರುವ ಅಧಿಕಾರಿಗಳನ್ನು ಕೂಡಲೇ ವಜಾಗೊಳಿಸಬೇಕು ಎಂದು ಸರ್ಕಾರವನ್ನು ಆಗ್ರಹಿಸಿದ್ದಾರೆ.

ಅವರ ಪ್ರಕಾರ, ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿ ಮೂರುರಿಂದ ನಾಲ್ಕು ತಿಂಗಳು ಕಳೆದರೂ ಯಾವುದೇ ಸ್ಪಷ್ಟ ಮಾಹಿತಿ ನೀಡದೇ ವಿಳಂಬ ಮಾಡಲಾಗುತ್ತಿದೆ. ಅರ್ಜಿದಾರರು ಫೋನ್ ಮೂಲಕ ವಿಚಾರಿಸಿದಾಗ "ಕಳಿಸುತ್ತೇವೆ" ಎಂಬ ಹಾರಿಕೆ ಉತ್ತರ ನೀಡಿ ತಪ್ಪಿಸಿಕೊಳ್ಳುತ್ತಿರುವುದು ಸಾಮಾನ್ಯವಾಗಿಬಿಟ್ಟಿದೆ ಎಂದು ದೂರಿದರು.

ಈ ನಿರ್ಲಕ್ಷ್ಯದಿಂದಾಗಿ ಹಳ್ಳಿಗಾಡಿನ ಜನರು ಹೆಚ್ಚು ಸಂಕಷ್ಟ ಅನುಭವಿಸುತ್ತಿದ್ದಾರೆ. ಸಣ್ಣ ಸಣ್ಣ ಮಾಹಿತಿಗಾಗಿ ಮೇಲ್ಮನವಿ ಸಲ್ಲಿಸಲು ಸಾಧ್ಯವಾಗದ ಗ್ರಾಮೀಣ ಪ್ರದೇಶದ ಜನರು ಕಚೇರಿಗೆ ಮರುಮರು ಅಲೆದಾಡಬೇಕಾದ ಪರಿಸ್ಥಿತಿ ಎದುರಿಸುತ್ತಿದ್ದಾರೆ.

ಕಂದಾಯ ಇಲಾಖೆಯ ಮುಖ್ಯ ಕಾರ್ಯದರ್ಶಿಗಳ ಗಮನಕ್ಕೆ ಈ ಸಮಸ್ಯೆಯನ್ನು ತಂದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ ಎಂಬುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಮಾಹಿತಿ ಹಕ್ಕು ಆಯೋಗ ಹಾಗೂ ಸಂಬಂಧಪಟ್ಟ ಸಚಿವರು ತಕ್ಷಣ ಮಧ್ಯಪ್ರವೇಶಿಸಿ, ಕಾನೂನು ಉಲ್ಲಂಘಿಸುತ್ತಿರುವ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

# 'ಚುನಾವಣೋತ್ತರ ಸಮೀಕ್ಷೆ ನಂಬಲ್ಲ'

ಬೆಂಗಳೂರು

"ಚುನಾವಣೋತ್ತರ ಸಮೀಕ್ಷೆಗಳು ನಮ್ಮ ಪರವಾಗಿರಲಿ, ಇಲ್ಲದಿರಲಿ ಅದರ ಮೇಲೆ ನನಗೆ ನಂಬಿಕೆ ಇಲ್ಲ. ನನ್ನ ತಂತ್ರಗಾರಿಕೆಯೇ ಬೇರೆ, ಈ ಬಾರಿ ಎಲ್ಲಾ ರಾಜ್ಯಗಳಲ್ಲಿ ಇಂಡಿಯಾ ಮೈತ್ರಿಕೂಟ ಅಧಿಕಾರಕ್ಕೆ ಬರಲಿದೆ" ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ಗುವಾಹಟಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಜೊತೆ ಸಭೆ ನಡೆಸಿದ ಬಳಿಕ ಶಿವಕುಮಾರ್ ಅವರು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು.

ಚುನಾವಣೋತ್ತರ ಸಮೀಕ್ಷೆ ವರದಿಗಳ ಬಗ್ಗೆ ಕೇಳಿದಾಗ, "ಈ ಸಮೀಕ್ಷೆಗಳಲ್ಲಿ ಬಳಸುವ ಮಾದರಿ ಪ್ರಮಾಣ ಬಹಳ ಸಣ್ಣದಾಗಿರುತ್ತವೆ. ಹೀಗಾಗಿ ನಮ್ಮ ಲೆಕ್ಕಾಚಾರ ಬೇರೆ ಇದೆ. ನಾನು ಯಾವುದೇ ರಾಜ್ಯಗಳ ಚುನಾವಣೋತ್ತರ ಸಮೀಕ್ಷೆ ನಂಬುವುದಿಲ್ಲ. ನಾನು ಇಲ್ಲಿಗೆ ಬಂದಿರುವುದೇ ನಮ್ಮ ಶಾಸಕರನ್ನು ರಕ್ಷಿಸಿ, ಮಾರ್ಗದರ್ಶನ ನೀಡಿ, ಶಕ್ತಿ ತುಂಬಲು" ಎಂದು ತಿಳಿಸಿದರು.

ಅಸ್ಸಾಂ ಚುನಾವಣೆ ಬಗ್ಗೆ ಕೇಳಿದಾಗ, "ನಮ್ಮ ಕಾರ್ಯಕರ್ತರು ಬಹಳ ವಿಭಿನ್ನ. ಹೀಗಾಗಿ ಅಸ್ಸಾಂನಲ್ಲಿ ಇಂಡಿಯಾ ಮೈತ್ರಿಕೂಟ ಅಧಿಕಾರಕ್ಕೆ ಬರಲಿದೆ. ನಮ್ಮ ನಾಯಕರ ಮೇಲೆ ನಮಗೆ ನಂಬಿಕೆ ಇದೆ. ಅವರು ಸಾಕಷ್ಟು ಪರಿಶ್ರಮ ಹಾಕಿದ್ದಾರೆ. ಮತದಾರರ ಮೇಲೆ ವಿಶ್ವಾಸವಿದೆ. ಅವರಿಗೆ ಬದಲಾವಣೆ ಬೇಕಾಗಿದೆ. ಆ ಬದಲಾವಣೆ ಸಿಗಲಿದೆ ಎಂಬ ಆತ್ಮವಿಶ್ವಾಸವಿದೆ" ಎಂದು ತಿಳಿಸಿದರು.

ತಮಿಳುನಾಡು ಚುನಾವಣೆ ಬಗ್ಗೆ ಕೇಳಿದಾಗ, "ದೇಶದಾದ್ಯಂತ ಇಂಡಿಯಾ ಮೈತ್ರಿಕೂಟದ ಸರ್ಕಾರ ಅಧಿಕಾರಕ್ಕೆ ಬರಲಿದೆ" ಎಂದರು.

ಪಶ್ಚಿಮ ಬಂಗಾಳದಲ್ಲಿ ಇಂಡಿಯಾ ಮೈತ್ರಿಕೋಟ ಅಧಿಕಾರಕ್ಕೆ ಬರುವುದೇ ಎಂದು ಕೇಳಿದಾಗ, "ಪ್ರತಿ ರಾಜ್ಯದಲ್ಲೂ ಇಂಡಿಯಾ ಮೈತ್ರಿಕೂಟ ಅಧಿಕಾರಕ್ಕೆ ಬರಲಿದೆ" ಎಂದರು.

# ಕೃಷಿ ಪ್ರಾಯೋಗಿಕ ಪರೀಕ್ಷೆ ತರಬೇತಿ

ಬೆಂಗಳೂರು

ಪಶುಸಂಗೋಪನೆ, ಬಿಎಸ್ಸಿ ಕೃಷಿ, ಬಿಎಸ್ಸಿ ತೋಟಗಾರಿಕೆ ಸೇರಿದಂತೆ ಒಟ್ಟು 12 ಕೋರ್ಸುಗಳಿಗೆ ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳಲ್ಲಿ ರೈತರ ಮಕ್ಕಳಿಗೆ 50 ಶೇಕಡಾ ಮೀಸಲಾತಿ ಲಭ್ಯವಿದ್ದು, ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ವಿಕ್ಸಿತ್47 ಅಕಾಡೆಮಿ ವತಿಯಿಂದ ಕೃಷಿ ಪ್ರಾಯೋಗಿಕ ಪರೀಕ್ಷೆಗೆ ಸಿದ್ಧತೆಗಾಗಿ ಮೇ 4ರಂದು ಒಂದು ದಿನದ ತರಬೇತಿ ಕಾರ್ಯಾಗಾರ ಆಯೋಜಿಸಲಾಗಿದೆ.

ಕೆಸಿಇಟಿ ಪರೀಕ್ಷೆಯ ಜೊತೆಗೆ ಕೃಷಿ ವಿಶ್ವವಿದ್ಯಾಲಯಗಳಲ್ಲಿ ನಡೆಸುವ ಪ್ರಾಯೋಗಿಕ ಪರೀಕ್ಷೆಯನ್ನು ಉತ್ತೀರ್ಣಗೊಳ್ಳುವುದು ಈ ಮೀಸಲಾತಿ ಪಡೆಯಲು ಅಗತ್ಯವಾಗಿರುವುದರಿಂದ, ವಿದ್ಯಾರ್ಥಿಗಳಿಗೆ ಸಮಗ್ರ ಮಾರ್ಗದರ್ಶನ ನೀಡುವ ಉದ್ದೇಶದಿಂದ ಈ ಕಾರ್ಯಾಗಾರವನ್ನು ಬೆಂಗಳೂರಿನ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಸಮೀಪ ಇರುವ ಅರಬಿಂದೋ ಶಾಲೆಯಲ್ಲಿ ನಡೆಸಲಾಗುತ್ತಿದೆ ಎಂದು ಅಕಾಡೆಮಿಯ ಮುಖ್ಯಸ್ಥರಾದ ತೇಜಸ್ ಎಚ್.ಎನ್ ತಿಳಿಸಿದ್ದಾರೆ.

ದ್ವಿತೀಯ ಪಿಯುಸಿ ಪೂರ್ಣಗೊಳಿಸಿ ಅಗ್ರಿ ಪ್ರಾಕ್ಟಿಕಲ್ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿರುವ ವಿದ್ಯಾರ್ಥಿಗಳು ಈ ಅವಕಾಶವನ್ನು ಬಳಸಿಕೊಳ್ಳುವಂತೆ ಅವರು ಮನವಿ ಮಾಡಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಹಾಗೂ ನೋಂದಣಿಗಾಗಿ 8217413646 ಸಂಖ್ಯೆಗೆ ಸಂಪರ್ಕಿಸಲು ಕೋರಲಾಗಿದೆ.

# ಖಾಸಗಿ ವಿದ್ಯುತ್ ಘಟಕಕ್ಕೆ ನೀರು ಹರಿಸುವುದಕ್ಕೆ ಆಕ್ರೋಶ

ಬೆಂಗಳೂರು

ರೈತರ ಬೆಳೆಗಳಿಗೆ ನೀರು ನೀಡದೆ ಖಾಸಗಿ ವಿದ್ಯುತ್ ಉತ್ಪಾದನಾ ಕೇಂದ್ರಕ್ಕೆ ನೀರು ಹರಿಸುತ್ತಿರುವ ಅಧಿಕಾರಿಗಳ ನಡೆ ಖಂಡನೀಯ ಎಂದು ಜಯಕರ್ನಾಟಕ ಜನಪರ ವೇದಿಕೆ ರಾಜ್ಯ ಸಲಹೆಗಾರ ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ನಗರದ ರೈತ ಸಂಘದ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಾರೋಬೆಲೆ ಡ್ಯಾಮ್‌ನಿಂದ ಚುಂಚಿ ಜಲವಿದ್ಯುತ್ ಉತ್ಪಾದನಾ ಕೇಂದ್ರಕ್ಕೆ ದಿನನಿತ್ಯ ನೂರಾರು ಕ್ಯೂಸೆಕ್ಸ್ ನೀರು ಹರಿಸಲಾಗುತ್ತಿದೆ. ಆದರೆ ರೈತರ ಹೊಲಗಳಿಗೆ ಅಗತ್ಯವಾದ ನೀರು ಪೂರೈಕೆ ಮಾಡದೇ ನಿರ್ಲಕ್ಷ್ಯ ತೋರಲಾಗುತ್ತಿದೆ ಎಂದು ಆರೋಪಿಸಿದರು.

ಅಣೆಕಟ್ಟು ನಿರ್ಮಾಣಕ್ಕೆ ಹಾಗೂ ಜಲವಿದ್ಯುತ್ ಯೋಜನೆಗೆ ಜಮೀನು ನೀಡಿದ ರೈತರ ಹಕ್ಕನ್ನು ಕಡೆಗಣಿಸಿ ಅಧಿಕಾರಿಗಳು ದ್ರೋಹ ಮಾಡುತ್ತಿದ್ದಾರೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು. ಹಾರೋಬೆಲೆ ಜಲಾಶಯದ ಎಂಜಿನಿಯರ್ ಕಚೇರಿಗೆ ರೈತರು ಮುತ್ತಿಗೆ ಹಾಕಲು ತೀರ್ಮಾನಿಸಿರುವುದಾಗಿ ತಿಳಿಸಿದರು.

ನಲ್ಲಹಳ್ಳಿ, ಏಳಗಳ್ಳಿ, ಒಡಕೆಕಟ್ಟೆ, ಹಾರೋಶಿವನಹಳ್ಳಿ, ಚುಂಚಿಕಾಲೋನಿ ಸೇರಿದಂತೆ ಹಲವು ಗ್ರಾಮಗಳಲ್ಲಿ ಬೋರ್‌ವೆಲ್‌ಗಳು ಬತ್ತಿಹೋಗಿದ್ದು, ಇದಕ್ಕೆ ಮುಖ್ಯ ಕಾರಣ ನಾಲೆಗಳಿಗೆ ನೀರು ಬಿಡದೇ ಇರುವ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂದು ಆರೋಪಿಸಿದರು.

ಒಂದು ವಾರದೊಳಗೆ ಸಂಬಂಧಪಟ್ಟ ಎಂಜಿನಿಯರ್‌ರನ್ನು ಅಮಾನತುಗೊಳಿಸಿ ರೈತರ ನಾಲೆಗಳಿಗೆ ನೀರು ಬಿಡದಿದ್ದರೆ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಅವರು ಎಚ್ಚರಿಸಿದರು.

ರೈತಸಂಘದ ಸಂಚಾಲಕ ಚೀಲೂರು ಮುನಿರಾಜು ಮಾತನಾಡಿ, ಚುಂಚಿ ಜಲವಿದ್ಯುತ್ ಯೋಜನೆಗಾಗಿ ಭೂಮಿ ನೀಡಿದ ರೈತರಿಗೆ ನ್ಯಾಯಸಮ್ಮತ ಪರಿಹಾರ ನೀಡಿಲ್ಲ. ಅರ್ಹ ರೈತರಿಗೆ ಪರಿಹಾರ ನೀಡದೇ ರಾಜಕೀಯ ಪ್ರಭಾವಿಗಳ ಪಾಲಿಗೆ ನೀಡಿರುವುದು ಅನ್ಯಾಯವಾಗಿದೆ ಎಂದು ಹೇಳಿದರು. ಈ ಕುರಿತು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡುವುದಾಗಿ ತಿಳಿಸಿದರು.

ಸಭೆಯಲ್ಲಿ ರೈತಸಂಘದ ತಾಲೂಕು ಅಧ್ಯಕ್ಷ ಪುಟ್ಟಮಾದೇಗೌಡ, ಕಾರ್ಯದರ್ಶಿ ನಲ್ಲಹಳ್ಳಿ ಶಿವಲಿಂಗ, ಹಾರೋಹಳ್ಳಿ ತಾಲೂಕು ಅಧ್ಯಕ್ಷ ಶಿವರಾಜು, ಜಿಲ್ಲಾ ಕಾರ್ಯದರ್ಶಿ ಕುಮಾರ್ ಹಾಗೂ ಮುಖಂಡರಾದ ಮಲ್ಲಯ್ಯ, ರಾಜು, ಉಮೇಶ್, ಗಿರೀಶ್, ಸುಂದರ್, ವೆಂಕಟೇಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ತನಿಖಾ ವರದಿಯನ್ನು ಬೇರೊಬ್ಬರಿಗೆ ಕಳುಹಿಸಿದ್ದೇಕೆ: ಲೋಕಾಯುಕ್ತ ಎಸ್.ಪಿ.ಗೆ ವಿಶೇಷ ನ್ಯಾಯಾಲಯ ತರಾಟೆ

ಬೆಂಗಳೂರು

"ನಿಮ್ಮ ಮೇಲೆ ಕುಳಿತಿರುವ ಸೂಪರ್ ಕಾಪ್ (ಪೊಲೀಸ್ ಅಧಿಕಾರಿ) ಯಾರು? ಯಾವ ಕಾನೂನಿನ ಅಡಿ ಅಂತಿಮ ವರದಿ ಸಲ್ಲಿಸಲು ಅನುಮತಿಗೆ ಕಾಯುತ್ತಿದ್ದೀರಿ" ಎಂದು ಲೋಕಾಯುಕ್ತ ಹಾಸನ–ಚಿಕ್ಕಮಗಳೂರು ಪೊಲೀಸ್ ವರಿಷ್ಠಾಧಿಕಾರಿಯನ್ನು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಮೌಖಿಕವಾಗಿ ತರಾಟೆಗೆ ತೆಗೆದುಕೊಂಡಿತು.

ಚಿಕ್ಕಮಗಳೂರಿನ ಶೃಂಗೇರಿಯ ಕಾಂಗ್ರೆಸ್ ಶಾಸಕ ಟಿ ಡಿ ರಾಜೇಗೌಡ, ಅವರ ಪತ್ನಿ ಮತ್ತು ಪುತ್ರನ ವಿರುದ್ಧದ ಆದಾಯ ಮೀರಿದ ಆಸ್ತಿ ಸಂಪಾದನೆ ಪ್ರಕರಣಕ್ಕೆ ಸಂಬಂಧಿಸಿದ ತನಿಖೆಯು ಮುಗಿದಿದ್ದು, ಮೇಲಧಿಕಾರಿಗಳ ಅನುಮತಿಗೆ ಕೇಂದ್ರೀಯ ಲೋಕಾಯುಕ್ತ ಕಚೇರಿಗೆ ವರದಿ ಕಳುಹಿಸಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಬಿ ಎನ್ ನಂದಿನಿ ಅವರು ನ್ಯಾಯಾಧೀಶರಾದ ಸಂತೋಷ್ ಗಜಾನನ್ ಭಟ್ ಅವರ ಪೀಠಕ್ಕೆ ತಿಳಿಸಿದರು.

ಇದರಿಂದ ಕೆರಳಿದ ಪೀಠವು "ತನಿಖಾ ವರದಿಯನ್ನು ಬೇರೊಬ್ಬರಿಗೆ ಕಳುಹಿಸಿದ್ದೇಕೆ? ಅದಕ್ಕೆ ಸಿಆರ್‌ಪಿಸಿಯಲ್ಲಿ ಅವಕಾಶ ಎಲ್ಲಿದೆ? ಯಾವ ಸೆಕ್ಷನ್ ಅಡಿ ಅವರಿಗೆ ಸಲ್ಲಿಸಿದ್ದೀರಿ. ಮೇಲಧಿಕಾರಿ ಒಪ್ಪಿಗೆ ನೀಡಿದ ಬಳಿಕ ನ್ಯಾಯಾಲಯಕ್ಕೆ ಸಲ್ಲಿಸುತ್ತೀರಾ? ಇದು ನಿಮ್ಮ ವಾದವೇ? ನಿಮ್ಮ ತನಿಖೆಯ ಮೇಲೆ ನಿಮಗೆ ನಿಯಂತ್ರಣ ಇಲ್ಲವೇ? ತನಿಖಾಧಿಕಾರಿಯಾಗಿ, ನೀವು ತನಿಖೆ ಪೂರ್ಣಗೊಳಿಸಿ, ವರದಿ ಸಿದ್ಧಪಡಿಸಿದ್ದೀರಿ. ಇಲ್ಲಿ ನಿಮ್ಮ ಸೂಪರ್ ತನಿಖಾಧಿಕಾರಿ ಯಾರು? ಇದು ಹೇಗೆ? ನೀವು ತನಿಖೆ ಪೂರ್ಣಗೊಳಿಸಿರುವಾಗ ಅದು ಏನೆಂದು ನೀವು ಹೇಳಬೇಕು. ಸಿಆರ್‌ಪಿಸಿಯ ಯಾವ ಸೆಕ್ಷನ್ ಅಡಿ ಮೇಲಧಿಕಾರಿ ತನಿಖಾ ವರದಿಗೆ ಒಪ್ಪಿಗೆ ನೀಡುತ್ತಾರೆ ತೋರಿಸಿ. ಸಿಆರ್‌ಪಿಸಿ, ಬಿಎನ್‌ಎಸ್‌ಎಸ್ ಮೀರಿ ಹೋಗಲಾಗದು. ಸಿಆರ್‌ಪಿಸಿ ಸೆಕ್ಷನ್ 173 ಅಡಿ ತನಿಖೆ ಮುಗಿದ ಮೇಲೆ ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕು" ಎಂದು ನ್ಯಾಯಾಲಯ ಹೇಳಿತು.

ತನಿಖೆಗೆ ಸಂಬಂಧಿಸಿದ ಸ್ಥಿತಿಗತಿ ವರದಿಯಲ್ಲಿ ತನಿಖೆ ಮುಗಿದಿದ್ದು, ಲೋಕಾಯುಕ್ತ ಕೇಂದ್ರ ಕಚೇರಿಗೆ ಅನುಮತಿಗಾಗಿ ಕಳುಹಿಸಲಾಗಿದೆ ಎಂದು ತಿಳಿಸಲಾಗಿದೆ. ತನಿಖಾ ಸಂಸ್ಥೆಗಳು ತಮ್ಮದೇ ಆದ ಪ್ರಕ್ರಿಯೆ ಸಂಹಿತಾ ಪಾಲಿಸುತ್ತವೆ ಎಂಬುದನ್ನು ದಾಖಲಿಸುವುದು ದುರದೃಷ್ಟಕರವಾಗಿದೆ. ಹಾಲಿ ಪೊಲೀಸ್ ವರಿಷ್ಠಾಧಿಕಾರಿ ತನಿಖಾಧಿಕಾರಿಯಾಗಿದ್ದು, ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಮೇಲಧಿಕಾರಿಗಳ ಯಾವ ಸೆಕ್ಷನ್ ಅಡಿ ಅನುಮತಿಬೇಕಾಗಿದೆ ಎಂಬುದನ್ನು ತಿಳಿಸಬೇಕು.

ಈ ಕುರಿತು ಮುಂದಿನ ವಿಚಾರಣೆಯ ವೇಳೆಗೆ ತನಿಖಾಧಿಕಾರಿ ವಿವರಿಸಬೇಕು" ಎಂದು ಆದೇಶಿಸಿರುವ ನ್ಯಾಯಾಲಯವು ವಿಚಾರಣೆಯನ್ನು ಮೇ 7, 2026ಕ್ಕೆ

# 'ಬೇಸಿಗೆ ಶಿಬಿರದ ಚಟುವಟಿಕೆಗಳು ಮಕ್ಕಳ ಪ್ರತಿಭೆಯನ್ನು ಹೊರತರಲು ಸಹಕಾರಿ'

ಬೆಂಗಳೂರು

ಭವಿಷ್ಯದಲ್ಲಿ ಮಕ್ಕಳಿಗೆ ಯಾವ ಚಟುವಟಿಕೆಯಲ್ಲಿ ಆಸಕ್ತಿ ಇದೆಯೋ ಅದರಲ್ಲಿ ಮುಂದುವರೆಸಲು ಬೇಸಿಗೆ ಶಿಬಿರ ಮೊದಲನೇ ಹೆಜ್ಜೆಯಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮತ್ತು ಹಿರಿಯ ಸಿವಿಲ್ ನ್ಯಾಯಾಧೀಶ ನೂರುನ್ನೀಸ ಅವರು ತಿಳಿಸಿದರು.

ರಾಜ್ಯ ಬಾಲಭವನ ಸೊಸೈಟಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಬಾಲಭವನ ಸಮಿತಿ ಸಹಭಾಗಿತ್ವದಲ್ಲಿ ಏಪ್ರಿಲ್ 15 ರಿಂದ 30ರವರೆಗೆ ಆಯೋಜಿಸಲಾಗಿದ್ದ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

15 ದಿನಗಳ ಕಾಲ ನಡೆದ ಬೇಸಿಗೆ ಶಿಬಿರದಲ್ಲಿ ಅಳವಡಿಸಿದ ಚಟುವಟಿಕೆಗಳನ್ನು ಮಕ್ಕಳು ಸಂಪೂರ್ಣವಾಗಿ ಬಳಸಿಕೊಂಡಿದ್ದು, ಇದರಿಂದ ಮಕ್ಕಳಿಗೆ ಒಂದು ಉತ್ತಮವಾದ ಅವಕಾಶವನ್ನು ಕಲ್ಪಿಸಿಕೊಟ್ಟಂತಾಗಿದೆ. ಮುಂದೆ ಮಕ್ಕಳು ಈ ತರಹದ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಿರುವುದರಿಂದ ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಹೊರತರಲು ಸಹಾಯವಾಗುತ್ತದೆ ಎಂದರು.



ಈ ಬೇಸಿಗೆ ಶಿಬಿರದಲ್ಲಿ ನನ್ನ ಇಬ್ಬರು ಮಕ್ಕಳೂ ಸಹ ಭಾಗವಹಿಸಿದ್ದಾರೆ. ಅದರಲ್ಲೂ ವಿಶೇಷವಾಗಿ ನನ್ನ ಮಗಳು ಯಕ್ಷಗಾನ ನೃತ್ಯದಲ್ಲಿ ಭಾಗವಹಿಸಿದ್ದು, ನನ್ನ ಕಾಲೇಜಿನ ದಿನಗಳಲ್ಲಿ ನಾನು ಯಕ್ಷಗಾನ ನೃತ್ಯ ಕಲಿಯಬೇಕು ಎಂಬ ಆಸೆ ಇತ್ತು. ಆದರೆ ಕಾರಣಾಂತರಗಳಿಂದ ಈಡೇರಲಿಲ್ಲ. ಆದರೆ ಇವತ್ತು ನನ್ನ ಮಗಳು ಯಕ್ಷಗಾನ ನೃತ್ಯ ಮಾಡುವುದನ್ನು ನೋಡಿ ತುಂಬಾ ಖುಷಿಯಾಗುತ್ತಿದೆ ಹಾಗೂ ನನ್ನ ಮಗನು ಕೂಡ ಸಮೂಹ ನೃತ್ಯ ಪ್ರದರ್ಶನದಲ್ಲಿ ಭಾಗವಹಿಸಿದ್ದಾನೆ. ಎಲ್ಲಾ ಮಕ್ಕಳ ಜೊತೆ ನನ್ನ ಮಕ್ಕಳಿಗೂ ಸಹ ಶಿಬಿರದಲ್ಲಿ ಭಾಗವಹಿಸಲು ಅವಕಾಶ ನೀಡಿದಂತಹ ಜಿಲ್ಲಾ ಬಾಲಭವನ ಸಮಿತಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ. ಇನ್ನು ಮುಂಬರುವ ವರ್ಷಗಳಲ್ಲಿಯೂ ಸಹ ನನ್ನ ಮಕ್ಕಳನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಬಾಲಭವನ ವತಿಯಿಂದ ಆಯೋಜಿಸುವ ಬೇಸಿಗೆ ಶಿಬಿರಕ್ಕೆ ಸೇರಿಸುತ್ತೇನೆ ಎಂದು ಹೇಳಿದರು.


ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉನಿರ್ದೇಶಕರು ಹಾಗೂ ಜಿಲ್ಲಾ ಬಾಲಭವನ ಸಮಿತಿ ಕಾರ್ಯದರ್ಶಿ ಡಾ|| ಎಸ್. ಸಿದ್ದರಾಮಣ್ಣ ಮಾತನಾಡಿ, ಜಿಲ್ಲಾ ಬಾಲಭವನದಿಂದ ಆಯೋಜಿಸಿದ 15 ದಿನಗಳ ಬೇಸಿಗೆ ಶಿಬಿರದ ಉದ್ದೇಶವೇನೆಂದರೆ, ರಜಾ ಅವಧಿಯಲ್ಲಿ ಶಾಲೆಯ ಚಟುವಟಿಕೆಗಳನ್ನು ಹೊರತುಪಡಿಸಿ ಮಕ್ಕಳು ಇತರೆ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿಕೊಡುವುದಾಗಿದೆ.

ಮಕ್ಕಳು ಈ ತರಹದ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಿರುವುದರಿಂದ ಮಕ್ಕಳ ಮೆದುಳು ಚುರುಕುಗೊಳ್ಳುತ್ತದೆ ಮತ್ತು ಹೆಚ್ಚು ಕ್ರಿಯಾಶೀಲವಾಗುತ್ತದೆ. ಮಕ್ಕಳು ಒಂದೊಂದು ರೀತಿಯ ಚಟುವಟಿಕೆಯಲ್ಲಿ ಆಸಕ್ತಿಯನ್ನು ಹೊಂದಿರುತ್ತಾರೆ. ಹಿಂದೆಲ್ಲಾ ಮಕ್ಕಳಿಗೆ ಊಟ ಮಾಡಿಸುವಾಗ ಪೋಷಕರು ಚಂದಮಾಮ ಹಾಗೂ ಪಂಚ ತಂತ್ರದ ಕಥೆಗಳನ್ನು ಹೇಳುತ್ತಿದ್ದರು.

ಈಗ ಆ ಕಥೆ ಹೇಳಿ ಊಟ ಮಾಡಿಸುವ ಪೋಷಕರು ಕಾಣುತ್ತಿಲ್ಲ. ಮಕ್ಕಳ ಆಸೆಯಂತೆ ಮಕ್ಕಳನ್ನು ಬೆಳೆಸಬೇಕು. ಅವರು ಯಾವ ಕ್ಷೇತ್ರದಲ್ಲಿ ಪರಿಣಿತಿ ಹೊಂದಿದ್ದಾರೆಂಬುದನ್ನು ಗುರುತಿಸಿ ಆ ಕ್ಷೇತ್ರದಲ್ಲಿ ಅವರನ್ನು ತೊಡಗಿಸಿಕೊಳ್ಳಲು ಪ್ರೇರೇಪಿಸಿದರೆ ಅವರು ಆ ಕ್ಷೇತ್ರದಲ್ಲಿ ಮುಂದುವರೆಯುತ್ತಾರೆ ಎಂದು ಅವರು ತಿಳಿಸಿದರು.

ಸಮಾರಂಭದಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ದಿನೇಶ್ ಆರ್. ಎಂ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಪವಿತ್ರ ಆರ್.ಜಿ, ತರಬೇತುದಾರರಾದ ಕರಾಟೆ ಶಿಕ್ಷಕ ಪ್ರಕಾಶ್, ಚಿತ್ರಕಲೆ ಶಿಕ್ಷಕಿ ಸೌಮ್ಯ, ನೃತ್ಯ ಶಿಕ್ಷಕ ಚೇತನ್, ರಂಗನಿರ್ದೇಶಕ ಕಾಂತರಾಜು ಮತ್ತು ಕಾರ್ಯಕ್ರಮ ಸಂಯೋಜಕಿ ಮಮತ ಪಿ., ಕಾರ್ಯಕ್ರಮ ಸಹಾಯಕಿ ಶಿಲ್ಪ ಜಿ.ಎಸ್. ಸೇರಿದಂತೆ ಶಿಬಿರದಲ್ಲಿ ಭಾಗವಹಿಸಿದ್ದ ಮಕ್ಕಳು ಹಾಗೂ ಪೋಷಕರು ಉಪಸ್ಥಿತರಿದ್ದರು.

# ಅದ್ದೂರಿಯಾಗಿ ನಡೆದ ಲಕ್ಷ್ಮೀವೆಂಕಟರಮಣಸ್ವಾಮಿ ಬ್ರಹ್ಮರಥೋತ್ಸವ



ಬೆಂಗಳೂರು

ಎರಡನೇ ತಿರುಪತಿ ಎಂದೇ ಪ್ರಸಿದ್ಧವಾಗಿರುವ ಗಡಿದಂ ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿ ಬ್ರಹ್ಮ ರಥೋತ್ಸವ ಕಾರ್ಯಕ್ರಮವನ್ನು ಪ್ರತಿ ವರ್ಷದಂತೆ ಇಂದು ಸಹ ಸಕಲ ಧಾರ್ಮಿಕ ವಿಧಿವಿಧಾನಗಳಂತೆ, ಸರ್ಕಾರಿ ಗೌರವಗಳೊಂದಿಗೆ ಬಾರಿ ವಿಜೃಂಬಣೆಯಿಂದ ಸಹಸ್ರಾರು ಭಕ್ತಾಧಿಗಳ ಸಮ್ಮುಖದಲ್ಲಿ ನೆರವೇರಿಸಲಾಯಿತು.

ಶ್ರೀಲಕ್ಷ್ಮೀವೆಂಕಟೇಶ್ವರಸ್ವಾಮಿಗೆ ಜಿಲ್ಲಾಧಿಕಾರಿ ಜಿ.ಪ್ರಭು,ತಹಸೀಲ್ದಾರ್ ಮನೀಷ್ ಎನ್.ಪತ್ರಿ ಅವರು ಮಂಗಳವಾದ್ಯಗಳೊಡುಗೆ ದೇವಾಲಯಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು. ಬೆಳಗ್ಗೆ ಅಭಿಷೇಕ, ಅರ್ಚನೆ ಮುಗಿದ ನಂತರ ರಥದ ಸುತ್ತಲೂ ರಥಾಂಗ ಹೋಮ ನಡೆಯಿತು ನಂತರ ಉತ್ಸವ ಮೂರ್ತಿಗಳನ್ನು ಮಂಗಳವಾದ್ಯಗಳೊಡನೆ ಮೆರವಣಿಗೆಯಲ್ಲಿ ತಂದು ರಥದ ಸುತ್ತಲೂ ಮೂರು ಸುತ್ತು ಹಾಕಿದ ನಂತರ ಉತ್ಸವ ಮೂರ್ತಿಗಳು ರಥದ ಮೇಲೆ ಪ್ರತಿಷ್ಠೆ ಮಾಡಲಾಯಿತು.

ಈ ಸಂದರ್ಭದಲ್ಲಿ ಜಾತ್ರೆಯಲ್ಲಿ ಸೇರಿದ ಅಪಾರ ಸಂಖ್ಯೆಯ ಭಕ್ತರು ಗೋವಿಂದಾ ಗೋವಿಂದಾ ಗೋವಿಂದಾ ನಾಮಸ್ಮರಣೆಯಿಂದ ರಥವನ್ನು ಜಿಲ್ಲಾಧಿಕಾರಿ ಜಿ.ಪ್ರಭು,ತಹಸೀಲ್ದಾರ್ ಮನೀಷ್ ಎನ್.ಪತ್ರಿ,ಚಿಮೂಲ್ ಅಧ್ಯಕ್ಷ ವಿ.ಮಂಜುನಾಥರೆಡ್ಡಿ ಹಾಗೂ ಭಕ್ತರು ಎಳೆದರು ಮತ್ತು ಭಕ್ತರು ರಥದ ಮೇಲೆ ಹೂವು,ಧಾವಣ ಹಾಗೂ ಬಾಳೇ ಹಣ್ಣು ಎಸೆದು ತಮ್ಮ ಇಷ್ಟಾರ್ಥಗಳನ್ನು ಕರುಣಿಸುವಂತೆ ಪ್ರಾರ್ಥನೆ ಮಾಡುತ್ತಿರುವುದು ಕಂಡುಬಂತು.

ಚಿಕ್ಕಮಕ್ಕಳಿಂದ ಹಿಡಿದು ವಯೋವೃದ್ದರವರಿಗೂ ರಥವನ್ನು ಎಳೆದರು. ದೇವಾಲಯದ ಸುತ್ತಲೂ ವಿದ್ಯುತ್ ದಿಪಾಲಂಕಾರ, ತಳಿರು ತೋರಣಗಳಿಂದ ಅಲಂಕಾರ ಮಾಡಲಾಗಿತ್ತು. ದೇವಾಲಯದ ಗೋಡೆಗಳಿಗೆ ಹೊಸ ಬಣ್ಣ ಹಾಕಿಸಿ ಹೊಸ ರೂಪ ನೀಡಲಾಗಿತ್ತು.

ಜಾತ್ರೆಯಲ್ಲಿ ಸಿಹಿಕಾರ ತಿಂಡಿಗಳ ಮಾರಾಟ ಮತ್ತು ಮಕ್ಕಳು ಅಟವಾಡುವ ಪರಿಕರಗಳ ಮಾರಾಟ ಜೋರಾಗಿ ಸಾಗಿತ್ತು. ಭಕ್ತರಿಗಾಗಿ ಪಾನಕ ಹೆಸರು ಹೆಸರುಬೇಳೆ ಹಂಚುತ್ತಿದ್ದ ದೃಶ್ಯ ಎಲ್ಲೆಡೆ ಕಂಡು ಬಂತು.ಇನ್ನು ಕೆಲವು ಗ್ರಾಮಸ್ಥರು ತಮ್ಮ ಎತ್ತಿನ ಗಾಡಿಗಳಿಗೆ ಅಲಂಕಾರ ಮಾಡಿಕೊಂಡು ತಮಟೆ ವಾದ್ಯಗಳೊಂದಿಗೆ ಸಂಪ್ರದಾಯ ಪದ್ದತಿಯಂತೆ ಪಾನಕ ಹೆಸರು ಬೇಳೆ ಹಂಚಿದರು. ಬ್ರಾಹ್ಮಣ, ಆರ್ಯವೈಶ್ಯ, ಸಮುದಾಯಗಳಿಂದ ಉಚಿತ ದಾಸೋಹ ಕಾರ್ಯಕ್ರಮ ಏರ್ಪಡಿಸಲಾಗಿತ್ತು ರಥೋತ್ಸವ ಕಾರ್ಯಕ್ರಮವನ್ನು ನೋಡಲು ತಾಲೂಕಿನ ಬೆಂಗಳೂರು,ಚಿಕ್ಕಬಳ್ಳಾಪುರ,ಬಾಗೇಪಲ್ಲಿ ಮತ್ತು ಮಿಟ್ಟೇಮರಿ ಹಾಗೂ ಆಂಧ್ರಪ್ರದೇಶ,ತಮಿಳುನಾಡು ರಾಜ್ಯಗಳಿಂದ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದರು.ಬ್ರಾಹ್ಮಣ ಮಹಾಸಭಾ,ಆರ್ಯವೈಶ್ಯ ಜಗಜ್ಯೋತಿ ಬಸವೇಶ್ವರ ಸಂಘ ಮತ್ತಿತರರ ಸಂಘಸಂಸ್ಥೆಗಳ ವತಿಯಿಂದ ದಾಸೋಹ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಭಕ್ತಾಧಿಗಳಿಗೆ ಪಾನಕ, ಹೆಸರುಬೇಳೆ ಕೋಸಂಬರಿ ವಿತರಿಸುವ ಹರಿಕೆಹೊತ್ತು, ಅಲಂಕಾರ ಮಾಡಿಕೊಂಡು ಜಾತ್ರೆಗೆ ಬಂದ ಎತ್ತಿನಗಾಡಿಗಳು, ವಿವಿಧ ಬಗೆಯ ತಿಂಡಿ ತಿನಸ್ಸುಗಳ, ಖಾರ, ಮಿಠಾಯಿ ಅಂಗಡಿಗಳು, ವಿವಿಧ ಹಣ್ಣುಗಳ ಅಂಗಡಿಗಳು, ಪಾತ್ರೆಸಾಮಾನು, ಪ್ಲಾಸ್ಟಿಕ್ ಅಂಗಡಿಗಳು, ರಂಗುರಂಗಿನಿಂದ ಅಲಂಕರಿಸಿಕೊಂಡು ಮಕ್ಕಳಿಗೆ ಮನರಂಜನೆ ನೀಡಬೇಕೆಂದು ಬಂದಿದ್ದ ಡಿಸ್ನಿಲ್ಯಾಂಡ್ ತಿಗರಿಗಳು ಕಳೆಕಟ್ಟಿದವು, ಜಾತ್ರೆಯ ತುಂಬಾ ತಳಿರು ತೋರಣಗಳಿಂದ, ಬಣ್ಣಬಣ್ಣದ ಬಂಟಿಂಗ್ಸ್‌ಗಳಿಂದ ಅಲಂಕರಿಸಲಾಗಿತ್ತು. ಬಿಸಿಲಿನ ಝಳ ಹೆಚ್ಚಾಗಿದ್ದರೂ, ಅಪಾರ ಸಂಖ್ಯೆಯಲ್ಲಿ ಭಕ್ತಾಧಿಗಳು, ದೂರ ದೂರದ ಊರುಗಳಿಂದ ತೆರಳಿಬಂದಿದ್ದರು, ಅಲ್ಲಲ್ಲಿ ಪಾನಕ, ಮಜ್ಜಿಗೆ ವಿತರಣೆ ಮಾಡುವ ಕೇಂದ್ರಗಳು, ಅನ್ನದಾನ ಕೇಂದ್ರಗಳು ಇದ್ದವು. ಗೋವಿಂದ ಗೋವಿಂದ ಎಂದು ಭಕ್ತಾಧಿಗಳು ರಥವನ್ನು ಎಳೆದರು. ಜಾನುವಾರು ಜಾತ್ರೆ: ನೂರಾರು ವರ್ಷಗಳ ಇತಿಹಾಸದಂತೆ ದೇವರಗುಡಿಪಲ್ಲಿ ಶ್ರೀಲಕ್ಷ್ಮೀವೆಂಕಟೇಶ್ವರಸ್ವಾಮಿ ಜಾತ್ರೆಯಲ್ಲಿ ಜಾನುವಾರುಗಳ ಮಾರಾಟ ಮತ್ತು ಖರೀದಿ ಜೋರಾಗಿ ಸಾಗಿತ್ತು ಗ್ರಾಪಂ ಆಡಳಿತ ಜಾನುವಾರುಗಳಿಗೆ ತೊಟ್ಟಿಗಳನ್ನು ನಿರ್ಮಾಣ ಮಾಡಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದರು. ಬ್ರಹ್ಮರಥೋತ್ಸವ ಕಾರ್ಯಕ್ರಮ ದೇವಾಲಯದ ಪ್ರಧಾನ ಅರ್ಚಕ ಕೆ.ಪ್ರಕಾಶ್‌ರಾವ್,ಸಹ ಅರ್ಚಕ ಅಶ್ವತ್ಥನಾರಾಯಣ್, ನೇತೃತ್ವದಲ್ಲಿ ಅದ್ದೂರಿಯಿಂದ ನೆರವೇರಿತು. ಜಿಲ್ಲಾಧಿಕಾರಿ ಜಿ.ಪ್ರಭು,ತಹಸೀಲ್ದಾರ್ ಮನೀಷ್ ಎನ್.ಪತ್ರಿ,ಚಿಮೂಲ್ ಅಧ್ಯಕ್ಷ ವಿ.ಮಂಜುನಾಥರೆಡ್ಡಿ,ಮಜುರಾಯಿ ಇಲಾಖೆಯ ರೇಣುಕಾ,ಡೇರಿ ಅಧ್ಯಕ್ಷ ಶಿವರಾಮರೆಡ್ಡಿ,ಗ್ರಾಪಂ ಮಾಜಿ ಅಧ್ಯಕ್ಷ ಸರಸ್ವತಮ್ಮ,ಪೊಲೀಸ್ ನಿರೀಕ್ಷಕ ಅಜಯ್‌ಸಾರಥಿ,ಪಿಡಿಒ ಶಂಕರಪ್ಪ,ಯಲ್ಲಂಪಲ್ಲಿ ಗ್ರಾಪಂ ಮಾಜಿ ಅಧ್ಯಕ್ಷ ಯರ್ರಕಿಟ್ಟಪ್ಪ,ಕಂಬಾಲಪಲ್ಲಿ ನಾರಾಯಣಸ್ವಾಮಿ ಮತ್ತಿತರರು ಇದ್ದರು.

# ಅದ್ದೂರಿಯಾಗಿ ನಡೆದ ನರಸಿಂಹಸ್ವಾಮಿ ಜಯಂತಿ



ಬೆಂಗಳೂರು

ವೈಶಾಖ ಮಾಸದ ಸ್ವಾತಿ ನಕ್ಷತ್ರದ ದಿನದಂದು ಪ್ರತಿ ವರ್ಷ ನಡೆಯುವ ಶ್ರೀ ನರಸಿಂಹಸ್ವಾಮಿ ಜಯಂತಿ ಈ ಬಾರಿಯೂ ತಾಲೂಕಿನ ಅನೇಕ ಧಾರ್ಮಿಕ ಕ್ಷೇತ್ರಗಳಲ್ಲಿ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.

ಕಾಡದಿಬ್ಬೂರು ಬಂಡ್ಲಕೆರೆ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇಗುಲದಲ್ಲಿ ಸಹಸ್ರಾರು ಭಕ್ತರು ದೇವರ ದರ್ಶನ ಪಡೆದು ಭಕ್ತಿಭಾವದಲ್ಲಿ ತೊಡಗಿದರು. ಕಾಡದಿಬ್ಬೂರು, ಪುರದಗಡ್ಡೆ, ಗುಂಡ್ಲಗುರ್ಕಿ, ದಿಬ್ಬೂರು, ಕತ್ತರಗುಪ್ಪೆ ಸೇರಿದಂತೆ ವಿವಿಧ ಗ್ರಾಮಗಳ ಮಹಿಳೆಯರು ತಂಬಿಟ್ಟು ಆರತಿ ಹಾಗೂ ದೀಪ ಬೆಳಗಿಸಿ ಭಗವಂತನಿಗೆ ನಮನ ಸಲ್ಲಿಸಿದರು.

ಕಳೆದ ಮೂರು ದಿನಗಳಿಂದ ನಡೆದ ಜಯಂತೋತ್ಸವ ಅಂಗವಾಗಿ ಶ್ರೀ ನರಸಿಂಹಸ್ವಾಮಿಗೆ ವಿಶೇಷ ಪೂಜೆ, ಅಭಿಷೇಕ ಸೇರಿದಂತೆ ವಿವಿಧ ದೈವಿಕ ಕಾರ್ಯಕ್ರಮಗಳು ಅತ್ಯಂತ ಶ್ರದ್ಧಾ ಭಕ್ತಿಯಿಂದ ನೆರವೇರಿಸಲಾಯಿತು. ಸಾವಿರಾರು ಭಕ್ತರು ಭಾಗವಹಿಸಿದ ಈ ಕಾರ್ಯಕ್ರಮದಲ್ಲಿ ಸಾಮೂಹಿಕ ಅನ್ನ ಸಂತರ್ಪಣೆಯೂ ನಡೆಯಿತು. ಅರ್ಚಕರು ಶಾಸ್ತ್ರೋಕ್ತ ಸಂಕಲ್ಪ ಪೂಜೆ ನೆರವೇರಿಸಿ ಲೋಕಕಲ್ಯಾಣಕ್ಕಾಗಿ ಪ್ರಾರ್ಥನೆ ಸಲ್ಲಿಸಿದರು. ಸ್ವಯಂಭು ದೇವರಾಗಿರುವ ಕಾಡದಿಬ್ಬೂರು ನರಸಿಂಹಸ್ವಾಮಿ ದೇವಾಲಯದ ಬಗ್ಗೆ ನೂರಾರು ವರ್ಷಗಳ ಇತಿಹಾಸವಿದ್ದು, ಇಲ್ಲಿ ಕಂಡುಬಂದ ಶಿಲೆಯ ಆಧಾರದ ಮೇಲೆ ಕಾಲಕ್ರಮೇಣ ಪೂಜಾ ಪರಂಪರೆ ಆರಂಭವಾಗಿ ಇಂದು ಸಾವಿರಾರು ಭಕ್ತರ ಆರಾಧ್ಯ ದೈವವಾಗಿ ನೆಲೆಗೊಂಡಿದೆ.

ಕಾರ್ಯಕ್ರಮದಲ್ಲಿ ಚಿಕ್ಕಬಳ್ಳಾಪುರ ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ದಿಬ್ಬೂರಿನ ಸುಬ್ಬರಾಯಪ್ಪ, ನಿವೃತ್ತ ಪ್ರಾಂಶುಪಾಲ ಡಿ.ಎಂ. ಶ್ರೀನಿವಾಸಲು, ನಿವೃತ್ತ ಉಪನ್ಯಾಸಕ ಪರಶಿವಮೂರ್ತಿ, ದೇವಾಲಯದ ಪ್ರಮುಖ ಭಕ್ತರಾದ ಟೈಲರ್ ಲಕ್ಷ್ಮಿಪತಿ ಕುಟುಂಬ, ಹಿರಿಯ ಪತ್ರಕರ್ತರಾದ ಬಾಲಕೃಷ್ಣ, ಸಾಹಿತಿ ಹಾಗೂ ಪತ್ರಕರ್ತ ಟಿ.ಎಸ್. ನಾಗೇಂದ್ರಬಾಬು, ಎಂ. ಕೃಷ್ಣಪ್ಪ ಸೇರಿದಂತೆ ಅಪಾರ ಭಕ್ತರು

# ಮಳೆ–ಬೆಳೆ ಸಮೃದ್ಧಿಯಾಗಲೆಂದು ವಿಶೇಷ ಪ್ರಾರ್ಥನೆ

ಬೆಂಗಳೂರು

ತಾಲೂಕಿನ ಬೈರಕೂರು ಪಂಚಾಯಿತಿ ವ್ಯಾಪ್ತಿಯ ಕಾಡೇನಹಳ್ಳಿ ಗ್ರಾಮದಲ್ಲಿ ಶ್ರೀ ಚೌಡೇಶ್ವರಿ ದೇವಿಯ 3ನೇ ವರ್ಷದ ಬ್ರಹ್ಮರಥೋತ್ಸವವು ಭಕ್ತಿಭಾವ ಹಾಗೂ ಸಾಂಪ್ರದಾಯಿಕ ವೈಭವದೊಂದಿಗೆ ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಬೈರಕೂರು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಕಾಡೇನಹಳ್ಳಿ ಅಶೋಕ್ ಕುಮಾರ್, ದೇವಿ ಆಶೀರ್ವಾದದಿಂದ ತಾಲೂಕಿನಲ್ಲಿ ಉತ್ತಮ ಮಳೆ ಹಾಗೂ ಬೆಳೆಯಾಗಿ ರೈತರು ಮತ್ತು ಸಾರ್ವಜನಿಕರು ನೆಮ್ಮದಿಯ ಜೀವನ ನಡೆಸಲೆಂದು ಪ್ರಾರ್ಥಿಸಿದರು. ಯಾವುದೇ ಜಾತಿಭೇದ ಇಲ್ಲದೆ ಎಲ್ಲರೂ ಸೇರಿ ಈ ಬ್ರಹ್ಮರಥೋತ್ಸವವನ್ನು ಒಗ್ಗಟ್ಟಿನಿಂದ ಆಚರಿಸುತ್ತಿರುವುದು ಸಂತಸದ ವಿಷಯ ಎಂದು ಹೇಳಿದರು.

ಶ್ರೀ ಚೌಡೇಶ್ವರಿ ದೇವಿಗೆ ಭಕ್ತರು ತಮ್ಮ ಇಷ್ಟಾರ್ಥಗಳನ್ನು ಸಲ್ಲಿಸಿದರೆ ಅವು ನೆರವೇರುತ್ತವೆ ಎಂಬ ನಂಬಿಕೆ ಮತ್ತು ನಿದರ್ಶನಗಳು ಇರುವುದರಿಂದ



ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ದೇವಸ್ಥಾನಕ್ಕೆ ಆಗಮಿಸಬೇಕು ಎಂದು ಅವರು ಮನವಿ ಮಾಡಿದರು.

ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಚೌಡೇಗೌಡ ಮಾತನಾಡಿ, ಈ ದೇವಾಲಯವು ಪುರಾತನವಾಗಿದ್ದು 1994ರಲ್ಲಿ ಗ್ರಾಮಸ್ಥರ ಸಹಕಾರದಿಂದ ಸ್ಥಾಪನೆಗೊಂಡಿದೆ ಎಂದು ಹೇಳಿದರು. ನಂತರ 2004ರಲ್ಲಿ ಕಲ್ಯಾಣ ಮಂಟಪ ನಿರ್ಮಿಸಿ ಸುತ್ತಮುತ್ತಲಿನ ಗ್ರಾಮಸ್ಥರಿಗೆ ಮದುವೆ ಕಾರ್ಯಗಳಿಗೆ ಅನುಕೂಲ ಮಾಡಿಕೊಡಲಾಗಿದೆ ಎಂದರು.

ಬ್ರಹ್ಮರಥೋತ್ಸವ ಅಂಗವಾಗಿ ದೇವರಿಗೆ ವಿಶೇಷ ಪೂಜೆ, ಅಭಿಷೇಕ, ಹೂವಿನ ಅಲಂಕಾರ ಸೇರಿದಂತೆ ವಿವಿಧ ಧಾರ್ಮಿಕ ವಿಧಿವಿಧಾನಗಳು ನೆರವೇರಿಸಲಾಯಿತು. ಭಕ್ತರಿಗೆ ತೀರ್ಥ, ಪ್ರಸಾದ, ಮಜ್ಜಿಗೆ, ಪಾನಕ, ಕೋಸಂಬರಿ ಹಾಗೂ ಅನ್ನಸಂತರ್ಪಣೆ ವಿತರಿಸಲಾಯಿತು.

ಭಕ್ತರು ಬಾಳೆಹಣ್ಣು, ಉಪ್ಪು–ಮೆಣಸು, ಹೂವುಗಳನ್ನು ರಥದ ಮೇಲೆ ಎಸೆದು ತಮ್ಮ ಹರಕೆಗಳನ್ನು ಸಲ್ಲಿಸಿ ದೇವರಲ್ಲಿ ಪ್ರಾರ್ಥನೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಆಹಾರ ಆಯೋಗದ ಸದಸ್ಯೆ ಕೆ.ಎಸ್. ವಿಜಯಲಕ್ಷ್ಮಿ, ದೇವಾಲಯ ಸಮಿತಿ ಮುಖಂಡ ಕಾಡೇನಹಳ್ಳಿ ಕೆ.ಎನ್. ಮಂಜುನಾಥ್, ಗ್ರಾಮ ಪಂಚಾಯಿತಿ ಸದಸ್ಯರ ಒಕ್ಕೂಟದ ಅಧ್ಯಕ್ಷ ಪೆತ್ತಾಂಡ್ಲಾಹಳ್ಳಿ ಶಂಕರ್ ಸೇರಿದಂತೆ ಅನೇಕ ಮುಖಂಡರು ಹಾಗೂ ನೂರಾರು ಭಕ್ತರು ಭಾಗವಹಿಸಿದ್ದರು.

# 'ಪೌರಾಣಿಕ ನಾಟಕಗಳು ಕನ್ನಡ ಭಾಷೆಯ ಸೊಗಡನ್ನು ಉಳಿಸಲು ಸಹಕಾರಿ'

ಬೆಂಗಳೂರು

ಕನ್ನಡ ನಾಟಕಗಳು, ವೃತ್ತಿ ರಂಗಭೂಮಿ ಹಾಗೂ ಗ್ರಾಮೀಣ ಪ್ರದೇಶದ ಪೌರಾಣಿಕ ನಾಟಕಗಳು ಕನ್ನಡ ಭಾಷೆಯ ಸೊಗಡನ್ನು ಉಳಿಸಿ ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ದೊಡ್ಡಬಳ್ಳಾಪುರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಪಿ.ಗೋವಿಂದರಾಜು ಹೇಳಿದರು.

ದೊಡ್ಡಬಳ್ಳಾಪುರ ತಾಲ್ಲೂಕು ಕಲಾವಿದರ ಸಂಘ ಮತ್ತು ಕನ್ನಡ ಸಂಸ್ಕೃತಿ ಇಲಾಖೆ ವತಿಯಿಂದ ನಡೆದ ಸಾಂಸ್ಕೃತಿಕ ಕಲಾ ಜ್ಯೋತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಯಕ್ಷಗಾನ, ದೊಡ್ಡಾಟ, ಬಯಲಾಟ ಸೇರಿದಂತೆ ಜನಪದ



ಕಲಾಪ್ರಕಾರಗಳು ಕನ್ನಡದ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುತ್ತವೆ ಎಂದು ಅವರು ತಿಳಿಸಿದರು.

ಆಧುನಿಕ ಕನ್ನಡ ರಂಗಭೂಮಿ ಸಾಮಾಜಿಕ ಸಮಸ್ಯೆಗಳು, ಮೌಲ್ಯಗಳು ಹಾಗೂ ಸಾಂಸ್ಕೃತಿಕ ತಲ್ಲಣಗಳನ್ನು ವೇದಿಕೆಯಲ್ಲಿ ಪ್ರತಿಬಿಂಬಿಸುವ ಮೂಲಕ ಸಮಾಜದಲ್ಲಿ ಜಾಗೃತಿ ಮೂಡಿಸುತ್ತಿದೆ. ಕನ್ನಡ ರಂಗಭೂಮಿಯಲ್ಲಿ ನಿರಂತರ ಪ್ರಯೋಗಗಳು ನಡೆಯುತ್ತಿರುವುದು ಶ್ಲಾಘನೀಯ ಎಂದು ಅವರು ಹೇಳಿದರು.

ಹಿರಿಯ ರಂಗಭೂಮಿ ಕಲಾವಿದ ಸುರಧೇನುಪುರ ಶಿವರಾಜು ಮಾತನಾಡಿ, ಕರ್ನಾಟಕದಲ್ಲಿ ಕನ್ನಡ ಭಾಷೆ ವೈವಿಧ್ಯಮಯ ಉಪಭಾಷೆಗಳ ರೂಪದಲ್ಲಿ ಬಳಕೆಯಾಗುತ್ತಿದೆ. ರಂಗಭೂಮಿ ಕಲಾವಿದರ ಕನ್ನಡ ಭಾಷೆಯ ಬಳಕೆ ಮತ್ತು ಸ್ಪಷ್ಟ ಉಚ್ಚಾರಣೆ ವಿಶೇಷವಾಗಿದ್ದು, ಆಧುನಿಕ ಮನರಂಜನಾ ಮಾಧ್ಯಮಗಳ ನಡುವೆ ರಂಗಭೂಮಿ ತನ್ನದೇ ಆದ ಸ್ಥಾನವನ್ನು ಉಳಿಸಿಕೊಂಡಿರುವುದು ಸಂತೋಷದ ಸಂಗತಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ದೊಡ್ಡಬಳ್ಳಾಪುರ ನಗರದ ಜಾನಪದ ಕಲಾವಿದೆ ರತ್ನಮ್ಮ ಹಾಗೂ ಜಂಗಮಕೋಟೆ ರಂಗಭೂಮಿ ಕಲಾವಿದೆ ಕದಿರಮ್ಮ ಅವರನ್ನು ತಾಲ್ಲೂಕು ಕಲಾವಿದರ ಸಂಘದಿಂದ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಹಿರಿಯ ರಂಗಭೂಮಿ ಕಲಾವಿದೆ ಜಯಮ್ಮ, ಗೌರವಾಧ್ಯಕ್ಷ ಎನ್. ರಾಮಮೂರ್ತಿ, ಕಾರ್ಯದರ್ಶಿ ಚಂದ್ರಶೇಖರ್, ಉಪಾಧ್ಯಕ್ಷ ಕೆ. ನರಸಿಂಹಯ್ಯ, ಖಜಾಂಚಿ ಮುನಿಪಾಪಯ್ಯ, ನಿರ್ದೇಶಕ ಜಿ. ರಾಮು, ವೆಂಕಟರಾಜು ಸೇರಿದಂತೆ ಹಲವರು ಭಾಗವಹಿಸಿದ್ದರು.

# ವಿನಯ್ ಕುಲಕರ್ಣಿ ಅನರ್ಹ

ಬೆಂಗಳೂರು

ದೀರ್ಘಕಾಲದ ಕಾನೂನು ಹೋರಾಟ ಮತ್ತು ರಾಜಕೀಯ ಜಿದ್ದಾಜಿದ್ದಿನ ನಂತರ, ಧಾರವಾಡ ಗ್ರಾಮೀಣ ಕ್ಷೇತ್ರದ ಶಾಸಕ ವಿನಯ್ ಕುಲಕರ್ಣಿಅವರ ಶಾಸಕತ್ವವನ್ನು ಅನರ್ಹಗೊಳಿಸಿ ಶನಿವಾರ ವಿಧಾನಸಭೆ ಕಾರ್ಯದರ್ಶಿ ಮಹತ್ವದ ಆದೇಶ ಆದೇಶ ಹೊರಡಿಸಿದ್ದಾರೆ.

ಜಿಲ್ಲಾ ಪಂಚಾಯತ್ ಸದಸ್ಯ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ವಿನಯ್ ಕುಲಕರ್ಣಿ ಅವರಿಗೆ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದ ನಂತರದ ಕೆಲವೇ ದಿನಗಳಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಈ ಆದೇಶದೊಂದಿಗೆ ಧಾರವಾಡ ಗ್ರಾಮೀಣ ವಿಧಾನಸಭಾ ಕ್ಷೇತ್ರವು ಅಧಿಕೃತವಾಗಿ ತೆರವಾಗಿದೆ.

ಭಾರತೀಯ ಸಂವಿಧಾನದ ವಿಧಿ 191(1)ಮತ್ತು ಜನಪ್ರತಿನಿಧಿ ಕಾಯ್ದೆ 1951ರ ಸೆಕ್ಷನ್ 8ರ ಅಡಿಯಲ್ಲಿ ಈ ಅನರ್ಹತೆ ಆದೇಶವನ್ನು ಹೊರಡಿಸಲಾಗಿದೆ. ನಿಯಮಗಳ ಪ್ರಕಾರ, ಯಾವುದೇ ಜನಪ್ರತಿನಿಧಿಗೆ ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿಯ ಜೈಲು ಶಿಕ್ಷೆಯಾದಲ್ಲಿ ಅವರು ತಕ್ಷಣವೇ ಶಾಸಕ ಸ್ಥಾನಕ್ಕೆ ಅನರ್ಹರಾಗುತ್ತಾರೆ.

# ಮಳೆಯಿಂದ ಬೆಳೆ ಹಾನಿ: ರೂಪಕಲಾ ಶಶಿದರ್ ಪರಿಶೀಲನೆ

ಬೆಂಗಳೂರು

ಇಲ್ಲಿಗೆ ಸಮೀಪದ ಶ್ರೀನಿವಾಸಸಂದ್ರ, ಕಂಗಾಂಡ್ಲಹಳ್ಳಿ, ಜಕ್ಕರಸನಕುಪ್ಪ ಗ್ರಾಪಂ ವ್ಯಾಪ್ತಿಯ ಏತೂರು, ನಕ್ಕನಹಳ್ಳಿ, ಕೆಸಿರೆಡ್ಡಿಗಾಂಡ್ಲಹಳ್ಳಿ, ಕೋಗಿಲಹಳ್ಳಿ ಹಾಗೂ ಐವಾರಹಳ್ಳಿ ಗ್ರಾಮಗಳಲ್ಲಿ ನೆನ್ನೆ ರಾತ್ರಿ ಸುರಿದ ಭಾರಿ ಮಳೆ ಹಾಗೂ ಗಾಳಿಯ ರಭಸಕ್ಕೆ ಸುಮಾರು 400 ಎಕರೆಗೂ ಅಧಿಕ ಪ್ರದೇಶದಲ್ಲಿ ಬೆಳೆದಿದ್ದ ಮಾವು ಮತ್ತು ಬಾಳೆ ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಬೆಳೆ ಹಾನಿಯ ಮಾಹಿತಿ ತಿಳಿದ ತಕ್ಷಣ ಶಾಸಕಿ ರೂಪಕಲಾ ಅವರು ಮಳೆಯಿಂದ ಹಾನಿಗೊಳಗಾದ ತೋಟಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನೆಲಕಚ್ಚಿದ ಮಾವು ಮರಗಳು ಹಾಗೂ ಮುರಿದು ಬಿದ್ದ ಬಾಳೆ ಗಿಡಗಳನ್ನು ಕಂಡು ರೈತರಿಗೆ ಧೈರ್ಯ ತುಂಬಿದರು.



ಈ ವೇಳೆ ಮಾತನಾಡಿದ ಅವರು, ಮಳೆಯ ಅಬ್ಬರದಿಂದ ರೈತರು ವರ್ಷಪೂರ್ತಿ ಪಟ್ಟ ಶ್ರಮವೆಲ್ಲ ನಷ್ಟವಾಗಿದೆ. ಸುಮಾರು 400 ಎಕರೆಗೂ ಅಧಿಕ ಪ್ರದೇಶದಲ್ಲಿ ಬೆಳೆ ಹಾನಿಯಾಗಿರುವುದು ಅತ್ಯಂತ ದುಃಖದ ಸಂಗತಿ.

ಬೆಳೆ ವಿಮೆ ಮಾಡಿಸಿದ್ದ ರೈತರಿಗೆ ಎಕರೆಗೆ ಸುಮಾರು 80 ಸಾವಿರ ರೂ. ಪರಿಹಾರ ಸಿಗುವ ಸಾಧ್ಯತೆ ಇದೆ. ಆದರೆ ವಿಮೆ ಮಾಡಿಸದ ರೈತರಿಗೆ ಸಹ ಬೆಳೆ ಸಮೀಕ್ಷೆ ನಡೆಸಿ ಸರ್ಕಾರದ ಮೂಲಕ ಸೂಕ್ತ ಪರಿಹಾರ ನೀಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಭರವಸೆ ನೀಡಿದರು.

ಮಾವು ಬೆಳೆಗಾರರ ಸಂಘದ ತಾಲ್ಲೂಕು ಅಧ್ಯಕ್ಷ ಅಭಿಲಾಷ್ ರೆಡ್ಡಿ ಮಾತನಾಡಿ, ಈ ಬಾರಿ ಉತ್ತಮ ಫಸಲಿನ ನಿರೀಕ್ಷೆಯಲ್ಲಿದ್ದ ರೈತರಿಗೆ ಮಳೆಯ ಆರ್ಭಟ ದೊಡ್ಡ ಹೊಡೆತ ನೀಡಿದೆ. ಸಾಲ ಮಾಡಿ ಬೆಳೆ ಬೆಳೆದಿದ್ದ ರೈತರು ಈಗ ಜೀವನ ನಿರ್ವಹಣೆಯಲ್ಲಿಯೇ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಅಳಲು ತೋಡಿಕೊಂಡರು.

ಸರ್ಕಾರದಿಂದ ಕನಿಷ್ಠ ಎಕರೆಗೆ 40 ರಿಂದ 50 ಸಾವಿರ ರೂ. ಪರಿಹಾರ ನೀಡಬೇಕು ಎಂದು ಅವರು ಒತ್ತಾಯಿಸಿದರು. ಸ್ಥಳದಲ್ಲಿದ್ದ ತೋಟಗಾರಿಕೆ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳಿಗೆ ತಕ್ಷಣವೇ ಜಂಟಿ ಸಮೀಕ್ಷೆ ನಡೆಸಿ ನಿಖರವಾದ ನಷ್ಟ ವರದಿ ಸಿದ್ಧಪಡಿಸುವಂತೆ ಶಾಸಕರು ಸೂಚಿಸಿದರು. ಜೊತೆಗೆ ಬೆಳೆ ವಿಮೆ ಕುರಿತು ರೈತರಿಗೆ ಹೆಚ್ಚಿನ ಜಾಗೃತಿ ಮೂಡಿಸಲು ತೋಟಗಾರಿಕೆ ಇಲಾಖೆ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಮಳೆ ಹಾನಿ ಪರಿಶೀಲನೆ ವೇಳೆ ಕಂದಾಯ ಅಧಿಕಾರಿಗಳು ಗೈರಾಗಿದ್ದ ಹಿನ್ನೆಲೆಯಲ್ಲಿ ಶಾಸಕಿ ರೂಪಕಲಾ ಅವರು ದೂರವಾಣಿ ಮೂಲಕ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ನಂತರ ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿದರು.

ಇದೇ ಸಂದರ್ಭದಲ್ಲಿ, ರೈತರಿಗೆ ಬೆಳೆ ಮುನ್ನೆಚ್ಚರಿಕೆ ಕ್ರಮಗಳು ಹಾಗೂ ವಿಮೆ ಕುರಿತು ಅರಿವು ಮೂಡಿಸಲು ಮುಂದಿನ ದಿನಗಳಲ್ಲಿ ಕ್ಷೇತ್ರದ ಎಲ್ಲಾ ರೈತರಿಗಾಗಿ ಒಂದು ದಿನದ ಕಾರ್ಯಾಗಾರ ಆಯೋಜಿಸಲಾಗುವುದು ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ನೂರಾರು ರೈತರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಕಂದವಾರ ಕೆರೆ ಕಲುಷಿತ ನೀರು ವಿರೋಧ

ಬೆಂಗಳೂರು

ತಾಲೂಕಿನ ಜನತೆಗೆ ತೀವ್ರ ಆರೋಗ್ಯ ಸಮಸ್ಯೆ ಉಂಟುಮಾಡುತ್ತಿರುವ ಹೆಚ್.ಎನ್. ವ್ಯಾಲಿ ಎರಡನೇ ಹಂತದ ನೀರು ಪೂರೈಕೆಯಿಂದ ಕಂದವಾರ ಕೆರೆ ಸೇರಿದಂತೆ ಸುತ್ತಮುತ್ತಲಿನ ಕೆರೆಗಳು ಕಲುಷಿತಗೊಂಡಿರುವುದನ್ನು ವಿರೋಧಿಸಿ ಭಗತ್ ಸಿಂಗ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಒಂದು ಲಕ್ಷ ಸಹಿ ಸಂಗ್ರಹ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ.

ಕಂದವಾರ ಕೆರೆಯಂಗಳದಲ್ಲಿ ನಡೆದ ಕಾರ್ಯಕ್ರಮದಲ್ಲಿ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಸಂದೀಪ್ ಬಿ. ರೆಡ್ಡಿ ಸ್ವತಃ ಸಹಿ ಹಾಕುವ ಮೂಲಕ ಅಭಿಯಾನವನ್ನು ಆರಂಭಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕಲುಷಿತ ನೀರಿನ ಬಳಕೆಯಿಂದ ಈ ಭಾಗದ ಜನರು ಡಯಾಲಿಸಿಸ್ ಸೇರಿದಂತೆ ಹಲವಾರು ಗಂಭೀರ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ದೊರಕುವಂತೆ ಮಾಡಲು ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಅವರು ಮುಂದುವರಿದು, ಸಂಗ್ರಹಿಸಲಾದ ಒಂದು ಲಕ್ಷ ಸಹಿಗಳನ್ನು ರಾಷ್ಟ್ರಪತಿಗಳಿಗೆ ಸಲ್ಲಿಸುವ ಉದ್ದೇಶ ಹೊಂದಲಾಗಿದೆ. ಜನರ ಆರೋಗ್ಯ ರಕ್ಷಣೆಗೆ ಸರ್ಕಾರ ಗಂಭೀರವಾಗಿ ಕ್ರಮ ಕೈಗೊಳ್ಳಬೇಕಿದೆ ಎಂದು ಒತ್ತಾಯಿಸಿದರು. ಈ ಅಭಿಯಾನ ಸಂಪೂರ್ಣವಾಗಿ ಜನರ ಸ್ವಯಂಪ್ರೇರಿತ ಸಹಭಾಗಿತ್ವದಿಂದ ನಡೆಯುತ್ತಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಡಯಾಲಿಸಿಸ್‌ನಿಂದ ಬಳಲುತ್ತಿರುವ ಚಿಕ್ಕಬಳ್ಳಾಪುರದ ಯುವಕ ಹಾಗೂ ಅವರ ತಾಯಿ ವೇದಿಕೆಗೆ ಆಹ್ವಾನಿಸಲ್ಪಟ್ಟು ಸ್ವಯಂಪ್ರೇರಿತವಾಗಿ ಸಹಿ ಹಾಕಿದರು. ಅವರ ಚಿಕಿತ್ಸಾ ವೆಚ್ಚವನ್ನು ಭಗತ್ ಸಿಂಗ್ ಚಾರಿಟಬಲ್ ಟ್ರಸ್ಟ್ ವಹಿಸಿಕೊಳ್ಳಲಿದೆ ಎಂದು ಸಂದೀಪ್ ಬಿ. ರೆಡ್ಡಿ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಹಿಂದೂಪರ ಸಂಘಟನೆಯ ಸಿದ್ಧಲಿಂಗ ಸ್ವಾಮೀಜಿ, ಕನ್ನಡಪರ ಹೋರಾಟಗಾರ ಬಾಲು ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಹಾಗೂ

# ನಂಬಿಕೆ ದ್ರೋಹಕ್ಕೆ ಬಲಿಯಾದ ಸುಂದರ ಸಂಸಾರ

ಬೆಂಗಳೂರು

ತಾಲೂಕು ಆಲ್ಕೆರೆ ಗ್ರಾಮದಲ್ಲಿ ನಡೆದ ಹೃದಯವಿದ್ರಾವಕ ಘಟನೆ ನಾಗರಿಕ ಸಮಾಜವನ್ನು ಬೆಚ್ಚಿಬೀಳಿಸಿದೆ. ಅಕ್ಕನ ಮಗನನ್ನು ಸ್ವಂತ ಮಗನಂತೆ ಸಾಕಿದ್ದ ಮಾವನ ಕುಟುಂಬದಲ್ಲಿ ಮೂಡಿದ ನಂಬಿಕೆ ದ್ರೋಹ, ಕೊನೆಗೆ ಇಬ್ಬರು ಮಕ್ಕಳು ಸೇರಿದಂತೆ ಒಟ್ಟು ಮೂವರ ಸಾವಿಗೆ ಕಾರಣವಾಗಿದೆ.

ಮೃತ ಶಿವಣ್ಣ ಅವರ ಅಕ್ಕ ಮರಣ ಹೊಂದಿದ ಬಳಿಕ ಅನಾಥನಾಗಿದ್ದ ಅಕ್ಕನ ಮಗ ಹೇಮಂತ್ ಅನ್ನು ಅವರು ಮನೆಗೆ ಕರೆತಂದು ತಮ್ಮ ಮಗನಂತೆ ಸಾಕಿದ್ದರು. ಆದರೆ ಕಾಲಕ್ರಮೇಣ ಹೇಮಂತ್ ಮತ್ತು ಶಿವಣ್ಣನ ಪತ್ನಿ ಕಾವ್ಯ ನಡುವೆ ಅಕ್ರಮ ಸಂಬಂಧ ಬೆಳೆದು, ಕುಟುಂಬದಲ್ಲಿ ಗಂಭೀರ ಅಶಾಂತಿ ಉಂಟಾಯಿತು.

ಈ ವಿಚಾರ ತಿಳಿದ ಶಿವಣ್ಣ ಮನನೊಂದು ಆತ್ಮಹತ್ಯೆಗೆ ಯತ್ನಿಸಿದ್ದ ಘಟನೆಗಳೂ ನಡೆದಿದ್ದವು. ನಂತರ ಗ್ರಾಮದಲ್ಲಿ ಹಿರಿಯರು ಪಂಚಾಯಿತಿ ನಡೆಸಿ, ಹೇಮಂತ್ ಅನ್ನು ಮನೆಯಿಂದ ಹೊರಹಾಕಿ ಕುಟುಂಬವನ್ನು ಉಳಿಸಲು ಸಲಹೆ ನೀಡಿದ್ದರು. ಕೆಲಕಾಲ ಪರಿಸ್ಥಿತಿ ಸುಧಾರಿಸಿದಂತಿದ್ದರೂ ಸಮಸ್ಯೆ ಸಂಪೂರ್ಣವಾಗಿ ಪರಿಹಾರವಾಗಿರಲಿಲ್ಲ.

ಕೆಲ ದಿನಗಳ ಹಿಂದೆ ಪತ್ನಿ ಕಾವ್ಯ ಹೇಮಂತ್ ಜೊತೆಗೆ ಮನೆ ಬಿಟ್ಟು ಹೋಗಿದ್ದಳು. ಈ ಕುರಿತು ಶಿವಣ್ಣ ಕುಣಿಗಲ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಪೊಲೀಸರು ಆಕೆಯನ್ನು ಪತ್ತೆಹಚ್ಚಿ ವಾಪಸ್ ತಂದ ಬಳಿಕ, ಆಕೆ ಕಣ್ಣೀರು ಹಾಕಿ ಮತ್ತೆ ಕುಟುಂಬದೊಂದಿಗೆ ಜೀವನ ಸಾಗಿಸುವುದಾಗಿ ಭರವಸೆ ನೀಡಿದ್ದಳು. ಆದರೆ ಆ ನಂಬಿಕೆ ಮತ್ತೆ ದ್ರೋಹಕ್ಕೆ ಕಾರಣವಾಯಿತು.

ಮನೆಗೆ ಮರಳಿದ ನಂತರ ಮರುದಿನವೇ ಶಿವಣ್ಣ ಕೆಲಸಕ್ಕೆ ತೆರಳಿದ ಸಮಯದಲ್ಲಿ ಕಾವ್ಯ ಮನೆಯಲ್ಲಿದ್ದ ಚಿನ್ನಾಭರಣ ಮತ್ತು ಹಣವನ್ನು ತೆಗೆದುಕೊಂಡು ಮತ್ತೆ ಹೇಮಂತ್ ಜೊತೆ ಪರಾರಿಯಾಗಿದ್ದಾಳೆ ಎಂದು ತಿಳಿದುಬಂದಿದೆ. ಈ ಘಟನೆ ಶಿವಣ್ಣನನ್ನು ತೀವ್ರ ಮಾನಸಿಕ ಒತ್ತಡಕ್ಕೆ ತಳ್ಳಿತು.

ಈ ಹಿನ್ನೆಲೆಯಲ್ಲಿ ಮನನೊಂದು, ಶಿವಣ್ಣ ತಮ್ಮ ಇಬ್ಬರು ಮಕ್ಕಳಾದ ಜೀವನ್ (10) ಮತ್ತು ಪ್ರಾಣೇಶ್ (5) ಅವರನ್ನು ಹತ್ಯೆಗೈದು, ನಂತರ ತಾವೂ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ಬಗ್ಗೆ ಮಾಹಿತಿ ಪಡೆದ ಅಡಿಷನಲ್ ಎಸ್‌ಪಿ ಹಾಗೂ ಕುಣಿಗಲ್ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡು

# ಗೌತಮ ಬುದ್ಧರ ಹಾಗೂ ಬಾಬಾಸಾಹೇಬರ ಪ್ರತಿಮೆಗೆ ಮಾಲಾರ್ಪಣೆ

ಬೆಂಗಳೂರು

2570ನೇ ವೈಶಾಖ ಬುದ್ಧ ಪೂರ್ಣಿಮೆ ಮತ್ತು ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ರವರ 135 ನೇ ಜಯಂತಿಯನ್ನು ಅಧಿಕಾರಹಟ್ಟಿಯ ಅರಿವೇ ಬುದ್ಧ ಧ್ಯಾನ ಕೇಂದ್ರ ಮತ್ತು ಬಾಬಾಸಾಹೇಬರ ಪ್ರತಿಮೆಯ ಆವರಣದಲ್ಲಿ ಗೌತಮ ಬುದ್ಧರ ಹಾಗೂ ಬಾಬಾಸಾಹೇಬರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಧಮ್ಮ ದೀಪವನ್ನು ಹಚ್ಚಿಆಚರಣೆಯ ಮಾಡಲಾಯಿತು.

ತಾಲೂಕಿನ ರಾಜೇನಹಳ್ಳಿ ಗ್ರಾ.ಪಂ.ವ್ಯಾಪ್ತಿಯ ಅಧಿಕಾರಹಟ್ಟಿ ಗ್ರಾಮದಲ್ಲಿರುವ. ಡಾ ಅಂಬೇಡ್ಕರ್ ಪುತ್ಥಳಿ ಬಳಿ ಕಾರ್ಯಕ್ರಮ ಆಯೋಜಕರು ಭೈರಪ್ಪ ಕುಟುಂಬದ ಅಂಬೇಡ್ಕರ್ ಅಪ್ಪಟ ಅಭಿಮಾನಿ ಭೀಮರಥ ಆನಂದ್ ಬೈರಾ ಹಾಗೂ ಸದಸ್ಯರು ಬುದ್ಧ ಜಯಂತಿ ಕಾರ್ಯಕ್ರಮ ಆಯೋಜನೆ ಮಾಡಿದ್ದರು.

ದೊಡ್ಡಮಲ್ಲೆ ರವಿ ತಂಡದವರಿಂದ ಕ್ರಾಂತಿಗೀತೆಗಳ ಹಾಡಲಾಯಿತು. ನಂತರ ಸಾರ್ವಜನಿಕರಿಗೆ ಪಾನಕ, ಮಜ್ಜಿಗೆ, ಕೋಸಂಬರಿ ವಿತರಿಸಲಾಯಿತು.


ಕಾರ್ಯಕ್ರಮದಲ್ಲಿ ಸ್ಥಳೀಯ ಕಾಂಗ್ರೆಸ್ ಮುಖಂಡರು ಮಾಜಿ ಉಪಾಧ್ಯಕ್ಷರು ರಾಜೇನಹಳ್ಳಿ ಗ್ರಾ.ಪಂ. ನಲ್ಲಾಂಡಹಳ್ಳಿ ನಾಗರಾಜಪ್ಪ, ದಲಿತ ಸಿಂಹ ಸೇನೆ ರಾಜ್ಯಾಧ್ಯಕ್ಷ ತಿಪ್ಪಸಂದ್ರ ಶ್ರೀನಿವಾಸ್, ರಮೇಶ್ ರಾಜೇನಹಳ್ಳಿ ಲೈಟಿಂಗ್ಸ್ ಗಿರೀಶ್, ಬೆಳಗಾವಿ, ಮೈಸೂರು, ಬೆಂಗಳೂರಿನ ಬುದ್ಧ ಬಸವ ಅಂಬೇಡ್ಕರ್ ಅನುಯಾಯಿಗಳು ಹಾಜರಿದ್ದರು.

# ‘ತಿಪಟೂರು ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ 97.29% ಸಾಧನೆ’

ಬೆಂಗಳೂರು

2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತಿಪಟೂರು ತಾಲ್ಲೂಕು 97.29% ಫಲಿತಾಂಶ ಸಾಧಿಸಿರುವುದು ಶೈಕ್ಷಣಿಕ ಕ್ಷೇತ್ರದಲ್ಲಿ ಮಹತ್ವದ ಮೈಲುಗಲ್ಲಾಗಿದೆ ಎಂದು ಶಾಸಕ ಕೆ. ಷಡಕ್ಷರಿ ಹೇಳಿದ್ದಾರೆ.

ನಗರಸಭೆಯಲ್ಲಿರುವ ಶಾಸಕರ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಉತ್ತಮ ಫಲಿತಾಂಶಕ್ಕೆ ಶ್ರಮಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಿಕ್ಷಕರು, ವಿವಿಧ ಇಲಾಖೆ ಅಧಿಕಾರಿಗಳು, ಪೋಷಕರು ಹಾಗೂ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದರು.



“ನಾನು ಮೊದಲ ಬಾರಿಗೆ ಶಾಸಕನಾದಾಗಿನಿಂದಲೇ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದೇನೆ. ಮುಂದೆಯೂ ಈ ಎರಡು ಕ್ಷೇತ್ರಗಳ ಅಭಿವೃದ್ಧಿಗೆ ನಿರಂತರ ಸಹಕಾರ ನೀಡಲಾಗುವುದು. ಪ್ರತಿ ವರ್ಷವೂ ಇಂತಹ ಉತ್ತಮ ಫಲಿತಾಂಶ ಮುಂದುವರಿಯಬೇಕು,” ಎಂದು ಅವರು ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ತಾರಾಮಣಿ ಮಾತನಾಡಿ, ವಿದ್ಯಾರ್ಥಿಗಳ ಫಲಿತಾಂಶ ಹೆಚ್ಚಿಸಲು ರಾತ್ರಿ 7 ರಿಂದ 8 ಗಂಟೆಯವರೆಗೆ ಆನ್‌ಲೈನ್ ತರಗತಿಗಳು ನಡೆಸಲಾಯಿತು. ಹಿಂದುಳಿದ ವಿದ್ಯಾರ್ಥಿಗಳ ಮನೆಗಳಿಗೆ ಭೇಟಿ ನೀಡಿ ಪೋಷಕರಿಗೆ ಮಾಹಿತಿ ನೀಡಲಾಗಿದೆ. ದಸರಾ ರಜೆಯಲ್ಲಿ ವಿಶೇಷ ತರಗತಿಗಳು, ಪೂರ್ವ ಸಿದ್ಧತಾ ಪರೀಕ್ಷೆಗಳು, ಪುನರಾವರ್ತನೆ ಘಟಕ ಪರೀಕ್ಷೆಗಳು ಹಾಗೂ ಮೌಲ್ಯಮಾಪನಗಳನ್ನು ಕಟ್ಟು ನಿಟ್ಟಾಗಿ ನಡೆಸಲಾಗಿದೆ ಎಂದು ವಿವರಿಸಿದರು.

ಅವರು ಮುಂದುವರಿದು, ನಳಂದ ಆಂಗ್ಲ ಶಾಲೆಯ ಕೆ. ಮಣಿಕಂಠ 625 ಅಂಕಗಳಿಗೆ 621 ಅಂಕಗಳನ್ನು ಪಡೆದಿದ್ದಾರೆ. ಕೆ.ಬಿ. ಕ್ರಾಸ್‌ನ ರಂಭಾಪುರಿ ಪ್ರೌಢಶಾಲೆಯ ಜಿ.ಆರ್. ವಿಸ್ಮಯ 620 ಅಂಕಗಳನ್ನು ಹಾಗೂ ಎಂ.ಪಿ. ಪ್ರಜ್ವಲ್ 619 ಅಂಕಗಳನ್ನು ಪಡೆದಿದ್ದಾರೆ ಎಂದು ತಿಳಿಸಿದರು. ಇವರನ್ನು ಮನೆಗಳಿಗೆ ಭೇಟಿ ನೀಡಿ ಸನ್ಮಾನಿಸಲಾಗಿದೆ ಎಂದರು. ತಾಲ್ಲೂಕಿನಲ್ಲಿ ಒಟ್ಟು 12 ಸರ್ಕಾರಿ, 9 ಅನುದಾನಿತ ಹಾಗೂ 10 ಅನುದಾನರಹಿತ ಪ್ರೌಢಶಾಲೆಗಳು ಸೇರಿ 31 ಶಾಲೆಗಳು ಶೇ.100 ಫಲಿತಾಂಶ ದಾಖಲಿಸಿರುವುದು ವಿಶೇಷವಾಗಿದೆ ಎಂದು ಅವರು ಹೇಳಿದರು.

ತಾಲ್ಲೂಕು ಪಂಚಾಯಿತಿ ಇಒ ಸುದರ್ಶನ್ ಮಾತನಾಡಿ, ಗ್ರಾಮ ಪಂಚಾಯಿತಿ ಪಿಡಿಒಗಳು ಹಾಗೂ ಸಂಬಂಧಿತ ಇಲಾಖೆಗಳ ಸಹಕಾರದಿಂದ ಶಿಕ್ಷಣ ವ್ಯವಸ್ಥೆಯಲ್ಲಿ ಉತ್ತಮ ಫಲಿತಾಂಶ ಸಾಧ್ಯವಾಗಿದೆ ಎಂದು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ನಗರಸಭೆ ಪೌರಾಯುಕ್ತ ವಿಶ್ವೇಶ್ವರ ಬದರಗಡೆ ಸೇರಿದಂತೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಹಾಜರಿದ್ದರು.

# ಅಧ್ಯಕ್ಷರಾಗಿ ತೊಂಡೋಟಿ ರಾಮಾಂಜಿನಪ್ಪ ನೇಮಕ



ಬೆಂಗಳೂರು

ಭಾರತೀಯ ಜನತಾ ಪಾರ್ಟಿ ಮಧುಗಿರಿ ಸಂಘಟನಾತ್ಮಕ ಜಿಲ್ಲೆಯ ಮಧುಗಿರಿ ಮಂಡಲದ ಎಸ್‌ಸಿ ಮೋರ್ಚಾ ಅಧ್ಯಕ್ಷರಾಗಿ ತೊಂಡೋಟಿ ರಾಮಾಂಜಿನಪ್ಪ ಅವರನ್ನು ನೇಮಕ ಮಾಡಲಾಗಿದೆ.

ಮಧುಗಿರಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಚಿದಾನಂದ ಎಂ. ಗೌಡ ಅವರ ಆದೇಶದ ಮೇರೆಗೆ ಹಾಗೂ ತಾಲೂಕು ಅಧ್ಯಕ್ಷ ಹನುಮಂತರೆಡ್ಡಿ ಅವರ ಅನುಮೋದನೆಯೊಂದಿಗೆ ಅಧಿಕೃತವಾಗಿ ನೇಮಕಾತಿ ಮಾಡಲಾಗಿದೆ. ಈ ಸಂದರ್ಭದಲ್ಲಿ ನೇಮಕಾತಿ ಪತ್ರ ಹಸ್ತಾಂತರಿಸಿ ರಾಮಾಂಜಿನಪ್ಪ ಅವರಿಗೆ ಶುಭ ಹಾರೈಸಲಾಯಿತು.

ಪಕ್ಷದ ತತ್ವ ಮತ್ತು ಸಿದ್ಧಾಂತಗಳಿಗೆ ಬದ್ಧವಾಗಿ ಕಾರ್ಯನಿರ್ವಹಿಸಿ, ಮಂಡಲ ವ್ಯಾಪ್ತಿಯಲ್ಲಿ ತಳಮಟ್ಟದಿಂದ ಪಕ್ಷ ಸಂಘಟನೆ ಬಲಪಡಿಸಬೇಕೆಂದು ನಾಯಕರು ಸೂಚಿಸಿದರು. ಸದೃಢ ಸಂಘಟನೆಗಾಗಿ ಸಕ್ರಿಯವಾಗಿ ಕೆಲಸ ಮಾಡುವ ವಿಶ್ವಾಸವನ್ನು ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷ ಪಾಂಡುರಂಗರೆಡ್ಡಿ, ತಾಲೂಕು ಬಿಎಸ್‌ಎ ವಿ. ಪದ್ಮಣ್ಣ, ಎಸ್‌ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ವಿ. ಕೃಷ್ಣಪ್ಪ, ತೆರಿಯೂರು ರಾಮಾಂಜನೇಯ, ಯುವ ಮೋರ್ಚಾ ಮಂಡಲಾಧ್ಯಕ್ಷ ಚೇತನ್ ಹಾಗೂ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

# ಕರಗ ಮಹೋತ್ಸವದಲ್ಲಿ ಸಂಪ್ರದಾಯದ ದೀಪಗಳ ರಂಗು

ಬೆಂಗಳೂರು

ನಗರದಲ್ಲಿ ಶುಕ್ರವಾರ ರಾತ್ರಿ ನಡೆಯಲಿರುವ ಹೂವಿನ ಕರಗ ಮಹೋತ್ಸವದ ಅಂಗವಾಗಿ ಸಂಪ್ರದಾಯ ಮತ್ತು ವರ್ಣರಂಜಿತ ದೀಪೋತ್ಸವವು ಭಕ್ತಿಭಾವದಿಂದ ಕಂಗೊಳಿಸಿತು. ಕರಗದ ತವರು ಮನೆ ಎಂದೇ ಪ್ರಸಿದ್ಧವಾಗಿರುವ ಕಾರಹಳ್ಳಿ ಹಾಗೂ ಕಾರಹಳ್ಳಿ ಗ್ರಾಮಗಳಿಂದ ತಂಬಿಟ್ಟು ದೀಪಗಳ ಮೆರವಣಿಗೆ ಭಕ್ತರ ಗಮನ ಸೆಳೆಯಿತು.

ಎರಡೂ ಗ್ರಾಮಗಳ ಮಹಿಳೆಯರು ವಿಶೇಷವಾಗಿ ತಯಾರಿಸಿದ ವಿವಿಧ ಆಕೃತಿಯ ದೀಪಗಳನ್ನು ಹೂವಿನ ಕರಗ ಮಾದರಿಯಲ್ಲಿ ಅಲಂಕರಿಸಿ ಭಕ್ತಿಯಿಂದ ಹೊತ್ತೊಯ್ದರು.

ದೀಪಗಳ ಮುಂದೆ ಶ್ರೀ ದ್ರೌಪತಾಂಬ ದೇವಿಯ ಭಾವಚಿತ್ರವನ್ನು ಇರಿಸಿಕೊಂಡು ನೂರಾರು ಮಹಿಳೆಯರು ಸಾಂಪ್ರದಾಯಿಕ ಉಡುಪುಗಳಲ್ಲಿ ಭಜನೆ ಹಾಗೂ ಮಂಗಳವಾದ್ಯಗಳ ನಡುವೆ ಶೋಭಾಯಾತ್ರೆಯಲ್ಲಿ ಭಾಗವಹಿಸಿದರು. ಮೆರವಣಿಗೆ ಸಾಗಿದ ರಸ್ತೆಗಳುದ್ದಕ್ಕೂ ದೀಪಗಳ ಕಂಗೊಳಿನಿಂದ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು.

ಬಂಗಾರಪೇಟೆ ಕರಗ ಹಿನ್ನೆಲೆಯಲ್ಲಿ ನಡೆದ ಈ ದೀಪೋತ್ಸವ ಶ್ರೀ ಧರ್ಮರಾಯಸ್ವಾಮಿ ದೇವಾಲಯ ತಲುಪಿದ ಬಳಿಕ ಮಹಿಳೆಯರು ವಿಶೇಷ ಪೂಜೆ



ಸಲ್ಲಿಸಿ ಕರಗ ಮಹೋತ್ಸವ ಯಶಸ್ವಿಯಾಗಲೆಂದು ಪ್ರಾರ್ಥಿಸಿದರು.

ದೀಪಗಳ ಸಾಲು, ಮಹಿಳೆಯರ ಭಕ್ತಿ ಹಾಗೂ ಸಾಂಸ್ಕೃತಿಕ ವೈಭವ ಕಂಡ ಸಾರ್ವಜನಿಕರು ರೋಮಾಂಚನಗೊಂಡರು.

ಕರಗ ಮಹೋತ್ಸವವು ಗ್ರಾಮೀಣ ಸಂಸ್ಕೃತಿ, ಮಹಿಳಾ ಭಕ್ತಿ ಹಾಗೂ ಪರಂಪರೆಯ ಜೀವಂತ ಸಂಕೇತವಾಗಿ ಎಲ್ಲರ ಮನಸೆಳೆಯಿತು.

# ಆಸ್ತಿ ತೆರಿಗೆ ಪಾವತಿಗೆ ರಿಯಾಯಿತಿ ವಿಸ್ತರಣೆ

ಬೆಂಗಳೂರು

ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಸಾರ್ವಜನಿಕರ ಹಿತದೃಷ್ಟಿಯಿಂದ 2026–27ನೇ ಸಾಲಿನ ಆಸ್ತಿ ತೆರಿಗೆಯನ್ನು ಪೂರ್ಣವಾಗಿ ಪಾವತಿಸುವ ತೆರಿಗೆದಾರರಿಗೆ ಶೇ.5%ರಷ್ಟು ರಿಯಾಯಿತಿ ನೀಡುವ ಅವಧಿಯನ್ನು ಮೇ 31 ರವರೆಗೆ ವಿಸ್ತರಿಸಿ ಆದೇಶಿಸಿದೆ ಪುರಸಭೆಗಳ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆರ್ಥಿಕ ವರ್ಷದ ಪ್ರಾರಂಭದ 30 ದಿನಗಳಲ್ಲಿ ಪೂರ್ಣ ಪ್ರಮಾಣದ ಆಸ್ತಿ ತೆರಿಗೆ ಪಾವತಿಸಿದಲ್ಲಿ ಶೇ.5 ರಷ್ಟು ರಿಯಾಯಿತಿ ನೀಡಲಾಗುತ್ತಿದೆ. ನಾಗರಿಕರು ಇದರ ಸದುಪಯೋಗ ಪಡೆದು ಕೊಳ್ಳುವಂತೆ ನಗರಸಭೆ ಪೌರಾಯುಕ್ತ ಎಂ.ಎಸ್.ಮಹದೇವ್ ಹೇಳಿದರು.

ನಗರಸಭೆ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ ಪೌರಾಡಳಿತ ನಿರ್ದೇಶನಾಲಯ 2026–27ನೇ ಸಾಲಿನಲ್ಲಿ ಶೇ.5ರ ರಿಯಾಯಿತಿಯನ್ನು ವಿಸ್ತರಿಸಿದಲ್ಲಿ, ತೆರಿಗೆ ಪಾವತಿಸಲು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪ್ರೋತ್ಸಾಹ ನೀಡಿದಂತಾಗುತ್ತದೆ ಹಾಗೂ ಆಸ್ತಿ ತೆರಿಗೆ ವಸೂಲಾತಿಯಲ್ಲಿ ಹೆಚ್ಚಿನ ಪ್ರಗತಿಯನ್ನು ನಿರೀಕ್ಷಿಸಬಹುದಾಗಿದ್ದು, ನಗರ ಸ್ಥಳೀಯ ಸಂಸ್ಥೆಗಳಿಗೆ ಆರ್ಥಿಕವಾಗಿ ಸಹಾಯವಾಗಲಿದೆ ಎಂದು ತಿಳಿಸಿ, ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಸಾರ್ವಜನಿಕರ ಹಿತದೃಷ್ಟಿಯಿಂದ 2026–27ನೇ ಸಾಲಿನ ಆಸ್ತಿ ತೆರಿಗೆಯನ್ನು ಪೂರ್ಣವಾಗಿ ಪಾವತಿಸುವ ತೆರಿಗೆದಾರರಿಗೆ ಶೇ.5%ರಷ್ಟು ರಿಯಾಯಿತಿ ನೀಡುವ ಅವಧಿಯನ್ನು ಮೇ 31 ರವರೆಗೆ ಪೌರಸಭೆಗಳ ಅಧಿನಿಯಮ, ರವರೆಗೆ ವಿಸ್ತರಿಸುವಂತೆ ಕೋರಲಾಗಿತ್ತು ಪೌರಾಡಳಿತ ನಿರ್ದೇಶನಾಲಯರವರ ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಪುಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ (ನಗರ ಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿ) 2026–27ನೇ ಸಾಲಿನ ಆಸ್ತಿ ತೆರಿಗೆಯನ್ನು ಪೂರ್ಣವಾಗಿ ಪಾವತಿಸುವ ತೆರಿಗೆದಾರರಿಗೆ ಶೇ.5%ರಷ್ಟು, ರಿಯಾಯಿತಿ ನೀಡಲು ಕಲ್ಪಿಸಿರುವ ಅವಕಾಶದ ಅವಧಿಯನ್ನು ಆರ್ಥಿಕ ವರ್ಷ 2026–27 ಸಾಲಿಗೆ ಮಾತ್ರ ಅನ್ವಯವಾಗುವಂತೆ ಮೇ 31 ರವರೆಗೆ ವಿಸ್ತರಿಸಿ ಆದೇಶಿಸಿದೆ.

# 18 ಕೋಟಿ ಮೌಲ್ಯದ ಡ್ರಗ್ಸ್ ವಶ

ಬೆಂಗಳೂರು

ಕಸ್ಟಮ್ಸ್ ಅಧಿಕಾರಿಗಳು ಭರ್ಜರಿ ಕಾರ್ಯಾಚರಣೆ ನಡೆಸಿ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 18.62 ಕೋಟಿ ರೂ. ಮೌಲ್ಯದ ಮಾದಕ ವಸ್ತು ಜಪ್ತಿ ಮಾಡಿದ್ದಾರೆ.

ಬ್ಯಾಂಕಾಕ್‌ನಿಂದ ಬಂದ ಮೂವರು ಪ್ಯಾಸೆಂಜರ್ ಬಳಿ ಇದ್ದ 18.62 ಕೋಟಿ ರೂ. ಮೌಲ್ಯದ 52.68 ಕೆ.ಜಿ ಹೈಡ್ರೋಪೋನಿಕ್ ಮಾದಕ ವಸ್ತುವನ್ನು ವಶಕ್ಕೆ ಪಡೆದಿದ್ದಾರೆ.

ಸದ್ಯ ಕಸ್ಟಮ್ಸ್ ಅಧಿಕಾರಿಗಳು ಮೂವರು ಆರೋಪಿಗಳನ್ನು ಬಂಧಿಸಿ ಎನ್‌ಡಿಪಿಎಸ್ ಆಕ್ಟ್ ಅಡಿ ಪ್ರಕರಣ ದಾಖಲಿಸಿಕೊಂಡಿಸಿದ್ದಾರೆ.

# ನಂದಿಗಿರಿ ಪ್ರದಕ್ಷಿಣೆಗೆ ಸಹಸ್ರಾರು ಭಕ್ತರೊಂದಿಗೆ ಚಾಲನೆ

ಬೆಂಗಳೂರು

ಹುಣ್ಣಿಮೆಯ ಪ್ರಯುಕ್ತ ಪ್ರತಿ ತಿಂಗಳು ನಡೆಯುವ ನಂದಿಗಿರಿ ಪ್ರದಕ್ಷಿಣೆಗೆ ಈ ಬಾರಿಯೂ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಅದ್ಧೂರಿಯಾಗಿ ಚಾಲನೆ ನೀಡಲಾಯಿತು. ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿ ಅವರು ಚಿಕ್ಕಬಳ್ಳಾಪುರದ ಐತಿಹಾಸಿಕ ನಂದಿ ಗ್ರಾಮದ ಶ್ರೀ ಭೋಗ ನಂದೀಶ್ವರ ದೇಗುಲದ ಆವರಣದಲ್ಲಿ “ನಂದಿಗಿರಿ ಪ್ರದಕ್ಷಣೆ”ಗೆ ಚಾಲನೆ ನೀಡಿದರು.

ಸಂಜೆ ಆರಂಭವಾದ ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಭಕ್ತರು ಶ್ರೀಗಳೊಂದಿಗೆ ಹೆಜ್ಜೆ ಹಾಕಿ ಗಿರಿ ಪ್ರದಕ್ಷಿಣೆಯಲ್ಲಿ ಭಾಗವಹಿಸಿದರು. ಇದು ಈ ಭಾಗದಲ್ಲಿ ನಡೆಯುತ್ತಿರುವ ಮೂರನೇ ನಂದಿಗಿರಿ ಪ್ರದಕ್ಷಿಣೆಯಾಗಿದ್ದು, ಭಕ್ತರ ಅಪಾರ ಭಾಗವಹಿಸುವಿಕೆ ಗಮನ ಸೆಳೆಯಿತು.



ಈ ವೇಳೆ ಮಾತನಾಡಿದ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿ, ನಂದಿಗಿರಿ ಪ್ರದಕ್ಷಣೆ ಜಿಲ್ಲೆಯ ಆಧ್ಯಾತ್ಮಿಕ ಪರಂಪರೆಯನ್ನು ಮತ್ತಷ್ಟು ಬಲಪಡಿಸುತ್ತದೆ. ಆಧುನಿಕ ಜೀವನದಲ್ಲಿಯೂ ಆಧ್ಯಾತ್ಮಿಕತೆ ಅಗತ್ಯವಾಗಿದೆ ಎಂದು ಹೇಳಿದರು. ವಿದ್ಯಾರ್ಥಿ ಜೀವನದಲ್ಲಿ ನಂದಿ ಗ್ರಾಮಕ್ಕೆ ಭೇಟಿ ನೀಡಿದ ನೆನಪನ್ನು ಹಂಚಿಕೊಂಡ ಅವರು, ಈ ಕ್ಷೇತ್ರದ ಮೇಲೆ ತಮ್ಮಲ್ಲಿ ಅಪಾರ ಭಕ್ತಿ ಇದೆ ಎಂದು ತಿಳಿಸಿದರು.

ಚಿಕ್ಕಬಳ್ಳಾಪುರ ಶಾಖಾ ಮಠದಲ್ಲಿ 12 ವರ್ಷಗಳ ಕಾಲ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದ ಸಮಯದಲ್ಲಿ ಹಲವು ಬಾರಿ ನಂದಿ ಕ್ಷೇತ್ರಕ್ಕೆ ಭೇಟಿ ನೀಡಿದ್ದನ್ನು ಅವರು ಸ್ಮರಿಸಿದರು.

ಹುಣ್ಣಿಮೆಯ ಸಂದರ್ಭ ಆದಿಚುಂಚನಗಿರಿ ಮಠದಲ್ಲಿಯೂ ಕಾರ್ಯಕ್ರಮ ಇರುವ ಕಾರಣ ನಿರಂತರವಾಗಿ ಭಾಗವಹಿಸಲು ಸಾಧ್ಯವಾಗದಿದ್ದರೂ, ನಂದಿಗಿರಿ ಪ್ರದಕ್ಷಣೆಯಲ್ಲಿ ಮತ್ತೆ ಮತ್ತೆ ಭಾಗವಹಿಸುವ ಆಸೆ ಇದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಂಸದ ಡಾ. ಕೆ. ಸುಧಾಕರ್ ಮಾತನಾಡಿ, ನಂದಿಗಿರಿ ಪ್ರದಕ್ಷಣೆ ಅರುಣಾಚಲೇಶ್ವರ ದೇವಾಲಯದ ಗಿರಿ ಪ್ರದಕ್ಷಣೆಯಷ್ಟೇ ಪುಣ್ಯಪ್ರದ ಎಂದು ಹೇಳಿದರು. ಭಕ್ತರು ದೂರದ ಯಾತ್ರೆ ಮಾಡುವ ಬದಲು ಸ್ಥಳೀಯವಾಗಿ ನಂದಿ ಕ್ಷೇತ್ರದಲ್ಲೇ ಈ ಧಾರ್ಮಿಕ ಅನುಭವ ಪಡೆಯಬಹುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮರಳುಕುಂಟೆ ಕೃಷ್ಣಮೂರ್ತಿ, ಚಿಮುಲ್ ನಿರ್ದೇಶಕ ಕೆ.ವಿ. ನಾಗರಾಜ್, ಒಕ್ಕಲಿಗರ ಸಂಘದ ನಿರ್ದೇಶಕ ಕೋನಪ್ಪ ರೆಡ್ಡಿ, ಮಾಜಿ ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಮಲಿಂಗಪ್ಪ ಸೇರಿದಂತೆ ಹಲವರು ಹಾಗೂ ನೂರಾರು ಭಕ್ತರು ಉಪಸ್ಥಿತರಿದ್ದರು.

ಗಿರಿ ಪ್ರದಕ್ಷಿಣೆಯಲ್ಲಿ ಭಾಗವಹಿಸಿದ ಭಕ್ತ ಯೋಗೀಂದ್ರನಾಥ್ ಅವರು ಮಾತನಾಡಿ, ಧಾರ್ಮಿಕ ಕ್ಷೇತ್ರಗಳಲ್ಲಿ ಅಹಂ ಬೇಡ, ಸೇವಾ ಭಾವನೆ ಮತ್ತು ಲೋಕಕಲ್ಯಾಣದ ಮನೋಭಾವನೆ ಇರಬೇಕು ಎಂದು ಹೇಳಿದರು.

05/05/2026
ಭಾರತ ಸಾರಥಿ
BHARATHA SARATHI KANNADA DAILY NEWS PAPER
ಬೆಂಗಳೂರು | ಬೆಂ.ಗ್ರಾಮಾಂತರ | ತುಮಕೂರು | ಮೈಸೂರು | ಮಂಡ್ಯ | ರಾಮನಗರ | ಕೋಲಾರ | ಚಿಕ್ಕಬಳ್ಳಾಪುರ | ಚಿತ್ರದುರ್ಗ | ದಾವಣಗೆರೆ | ಶಿವಮೊಗ್ಗ | ಮಂಗಳೂರು | ಉಡುಪಿ | ಹುಬ್ಬಳ್ಳಿ | ಮಡಿಕೇರಿ | ಚಿಕ್ಕಮಗಳೂರು | ಹಾಸನ | ಬಳ್ಳಾರಿ
ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

# ಶಿಕ್ಷಕರ ಸಂಘದ ಚುನಾವಣೆ ಫಲಿತಾಂಶ ಪ್ರಕಟ



ಬೆಂಗಳೂರು

ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯ ಫಲಿತಾಂಶ ಪ್ರಕಟವಾಗಿದ್ದು, ಬಾಲಾಜಿ, ಇ.ಎನ್. ಶ್ರೀರಾಮರೆಡ್ಡಿ ಹಾಗೂ ಕೆ. ಸುಬ್ಬಲಕ್ಷ್ಮಮ್ಮ ಜಯಗಳಿಸಿದ್ದಾರೆ.

ಪಟ್ಟಣದ ಕೆಪಿಎಸ್ ಶಾಲಾ ಆವರಣದಲ್ಲಿ ನಡೆದ ಈ ಚುನಾವಣೆ ತೀವ್ರ ಪೈಪೋಟಿಗೆ ಸಾಕ್ಷಿಯಾಗಿ ಶಿಕ್ಷಕರ ವಲಯದಲ್ಲಿ ಹೆಚ್ಚಿನ ಕುತೂಹಲಕ್ಕೆ ಕಾರಣವಾಯಿತು. ಸಾಮಾನ್ಯ ಕ್ಷೇತ್ರದಿಂದ ನಡೆದ ಚುನಾವಣೆಯಲ್ಲಿ ಒಟ್ಟು ನಾಲ್ಕು ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಫಲಿತಾಂಶದಲ್ಲಿ ಬಾಲಾಜಿ 80 ಮತಗಳನ್ನು ಪಡೆದು ಅಗ್ರಸ್ಥಾನ ಪಡೆದರೆ, ಇ.ಎನ್. ಶ್ರೀರಾಮರೆಡ್ಡಿ 72 ಮತಗಳನ್ನು ಪಡೆದು ಜಯಶಾಲಿಯಾದರು. ವಿ. ಶ್ರೀರಾಮಪ್ಪ 65 ಮತಗಳನ್ನು ಹಾಗೂ ಎಂ. ಶಂಕರ್ 54 ಮತಗಳನ್ನು ಪಡೆದುಕೊಂಡರು.

ಮಹಿಳಾ ಮೀಸಲು ಕ್ಷೇತ್ರದಲ್ಲಿ ನಡೆದ ನೇರ ಸ್ಪರ್ಧೆಯಲ್ಲಿ ಕೆ.ಸುಬ್ಬಲಕ್ಷ್ಮಮ್ಮ 75 ಮತಗಳನ್ನು ಪಡೆದು ಗೆಲುವು ಸಾಧಿಸಿದರು. ಅವರ ಪ್ರತಿಸ್ಪರ್ಧಿ ಶ್ವೇತಾ 67 ಮತಗಳನ್ನು ಪಡೆದು ಪರಾಭವಗೊಂಡರು.

ತಾಲ್ಲೂಕಿನಲ್ಲಿ ಒಟ್ಟು 148 ಶಿಕ್ಷಕ ಮತದಾರರಿದ್ದು, ಅದರಲ್ಲಿ 146 ಮಂದಿ ಮತ ಚಲಾಯಿಸಿದರು. ಕೇವಲ ಇಬ್ಬರು ಮತದಾರರು ಗೈರುಹಾಜರಾಗಿದ್ದು, ಚಲಾವಣೆಯಾದ ಮತಗಳಲ್ಲಿ 3 ಮತಗಳು ಅಸಿಂಧು ಎಂದು ಘೋಷಿಸಲಾಯಿತು.

ಚುನಾವಣಾ ಪ್ರಕ್ರಿಯೆ ಸಂಪೂರ್ಣ ಶಾಂತಿಯುತವಾಗಿ ನಡೆಯಿತು ಎಂದು ಚುನಾವಣಾಧಿಕಾರಿ ಕೃಷ್ಣಕುಮಾರಿ ತಿಳಿಸಿದರು. ಫಲಿತಾಂಶ ಪ್ರಕಟವಾದ ಬಳಿಕ ವಿಜೇತ

# 20 ತುಮಕೂರಿನಲ್ಲಿ ಬೃಹತ್ ಸಮಾವೇಶ: ಸಚಿವ ಡಾ.ಜಿ.ಪರಮೇಶ್ವರ್

ಬೆಂಗಳೂರು

ಇದೇ 20ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರಕ್ಕೆ 3 ವರ್ಷ ತುಂಬಲಿದ್ದು, ತುಮಕೂರಿನಲ್ಲಿ ಬೃಹತ್ ಸಮಾವೇಶ ಹಮ್ಮಿಕೊಳ್ಳಲು ಯೋಜಿಸಲಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಸಕಲ ಸಿದ್ಧತೆ ಕೈಗೊಳ್ಳುವಂತೆ ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ: ಜಿ. ಪರಮೇಶ್ವರ ಅವರು ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಶನಿವಾರ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ತುಮಕೂರು ಜಿಲ್ಲೆಯಲ್ಲಿ ಕಂದಾಯ ಇಲಾಖೆ ಹಾಗೂ ವಿವಿಧ ಇಲಾಖೆಗಳ ಅಭಿವೃದ್ಧಿ ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆಸಲು ಉದ್ದೇಶಿಸಲಾಗಿತ್ತು. ಆದರೆ ಈಗ ಮೇ 20ರಂದೇ ರಾಜ್ಯ ಸರ್ಕಾರಕ್ಕೆ 3 ವರ್ಷಗಳು ತುಂಬುತ್ತಿರುವ ಹಿನ್ನೆಲೆಯಲ್ಲಿ



ತುಮಕೂರಿನಲ್ಲೇ ರಾಜ್ಯ ಮಟ್ಟದ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗುತ್ತಿದೆ ಎಂದು ಅವರು ತಿಳಿಸಿದರು.

20ರಂದು ನಡೆಯುವ ಸಮಾವೇಶಕ್ಕೆ ರಾಜ್ಯಾದ್ಯಂತ 2ಲಕ್ಷಕ್ಕೂ ಅಧಿಕ ಫಲಾನುಭವಿಗಳು ಭಾಗವಹಿಸಲಿದ್ದು, ರಾಜ್ಯಾದ್ಯಂತ ಆಗಮಿಸುವ ಫಲಾನುಭವಿಗಳಿಗಾಗಿ 4,000 ಬಸ್ಸುಗಳ ಅಗತ್ಯವಿರುತ್ತದೆ. ಅಲ್ಲದೆ, ರಾಜ್ಯ ಸರ್ಕಾರದ ಅಭೂತಪೂರ್ವ ಯಶಸ್ವಿ ಯೋಜನೆಗಳ ಅನುಷ್ಠಾನ ಮತ್ತಿತರ ಇಲಾಖೆಗಳ ಪ್ರಗತಿ ದರ್ಶನ ಕುರಿತ ವಸ್ತುಪ್ರದರ್ಶನ ನಡೆಯಲಿದೆ. ಅಲ್ಲದೆ, ಫಲಾನುಭವಿಗಳಿಗೆ ಸವಲತ್ತುಗಳ ವಿತರಣೆ ಕಾರ್ಯಕ್ರಮವನ್ನೂ ಹಮ್ಮಿಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ತಮ್ಮ ಇಲಾಖೆಗೆ ಸಂಬಂಧಿಸಿದ ಪ್ರಗತಿಯ ಪಟ್ಟಿ, ಶಂಕುಸ್ಥಾಪನೆ ಅಥವಾ ಉದ್ಘಾಟನೆಯಾಗಬೇಕಿರುವ ಮಾಹಿತಿ ಹಾಗೂ ಶಿಲಾನ್ಯಾಸ ಫಲಕಗಳ ಮಾಹಿತಿಯನ್ನು ಜಿಲ್ಲಾಡಳಿತಕ್ಕೆ ತಕ್ಷಣ ಒದಗಿಸಬೇಕು. ರಾಜ್ಯಾದ್ಯಂತ ಫಲಾನುಭವಿಗಳು ಬೃಹತ್ ಸಮಾವೇಶಕ್ಕೆ ಆಗಮಿಸುವುದರಿಂದ ಅವರಿಗೆ ಆಸನ ವ್ಯವಸ್ಥೆ, ಊಟ, ಸಾರಿಗೆ, ಇತ್ಯಾದಿ ವ್ಯವಸ್ಥೆಗಳನ್ನು ಯಾವುದೇ ಲೋಪವಿಲ್ಲದಂತೆ ನಿಭಾಯಿಸಬೇಕಿದೆ. ಇದಕ್ಕಾಗಿ ಜಿಲ್ಲಾಡಳಿತ ಉಪಸಮಿತಿಗಳನ್ನು ರಚಿಸಿ, ಜವಾಬ್ದಾರಿಗಳನ್ನು ಹಂಚುವಂತೆ ಅವರು ಸೂಚಿಸಿದರು.

ಸಮಾವೇಶಕ್ಕೆ ಬಹುತೇಕ ಎಲ್ಲಾ ಸಚಿವರು, ಶಾಸಕರು, ಸಂಸದರೂ ಆಗಮಿಸಲಿದ್ದು, ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ಕಾರ್ಯಕ್ರಮ ಆಯೋಜಿಸಲು ತಾತ್ಕಾಲಿಕವಾಗಿ ಚಿಂತನೆ ನಡೆಸಲಾಗಿದೆ. ಈ ಹಿನ್ನೆಲೆಯಲ್ಲಿ ಸಮಾರಂಭದ ವೇದಿಕೆ, ಫಲಾನುಭವಿಗಳಿಗೆ ಊಟದ ವ್ಯವಸ್ಥೆ, ವಸ್ತುಪ್ರದರ್ಶನ ಹಾಗೂ ಹೆಲಿಪ್ಯಾಡ್ ಇತ್ಯಾದಿ ವಿಷಯಗಳ ಕುರಿತು ಜಿಲ್ಲಾಡಳಿತ ತುರ್ತಾಗಿ ಯೋಜನೆ ರೂಪಿಸಬೇಕಿದೆ. ಅಲ್ಲದೆ, ಶಂಕುಸ್ಥಾಪನೆ ಹಾಗೂ ಉದ್ಘಾಟನೆಗೊಳ್ಳಲಿರುವ ಇಲಾಖೆ ಕಟ್ಟಡಗಳ ಮಾಹಿತಿಯನ್ನು ಲೋಕೋಪಯೋಗಿ ಇಲಾಖೆಗೆ ನೀಡಬೇಕು. ಅವರು ಶಿಲಾನ್ಯಾಸ ಫಲಕಗಳ ಜಾಗ ಮತ್ತಿತರ ವ್ಯವಸ್ಥೆಯನ್ನು ಮಾಡಿಕೊಳ್ಳಲಿದ್ದಾರೆ ಎಂದು ಅವರು ಸೂಚಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್, ಅಪರ ಜಿಲ್ಲಾಧಿಕಾರಿ ಡಾ: ಎನ್. ತಿಪ್ಪೇಸ್ವಾಮಿ ಸೇರಿದಂತೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಮತ್ತಿತರ ಅಧಿಕಾರಿಗಳು ಉಪಸ್ಥಿತರಿದ್ದರು.

# ಜಿಲ್ಲಾಡಳಿತದಿಂದ ಭಗವಾನ್ ಬುದ್ಧ ಜಯಂತಿ ಆಚರಣೆ

ಬೆಂಗಳೂರು

ಭಗವಾನ್ ಬುದ್ಧರ ತತ್ವ ಸಿದ್ಧಾಂತಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡಾಗ ಮಾತ್ರ ಶಾಂತಿ ನೆಲೆಸಲು ಸಾಧ್ಯವಾಗುತ್ತದೆ ಎಂದು ಜಿಲ್ಲಾಧಿಕಾರಿ ಡಾ.ರವಿ ಅವರು ಅಭಿಪ್ರಾಯಪಟ್ಟರು.

ನಗರದ ಟಿ.ಚೆನ್ನಯ್ಯ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ನಡೆದ ಭಗವಾನ್ ಬುದ್ಧರ ಜಯಂತಿ ಆಚರಣೆಯಲ್ಲಿ ಭಗವಾನ್ ಬುದ್ಧರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ಬುದ್ಧರು ಇಡೀ ಜಗತ್ತಿಗೆ ಶಾಂತಿ, ಕರುಣೆ ಹಾಗೂ ಸಹಬಾಳ್ವೆ ಸಂದೇಶ ನೀಡಿ ಜಗಕ್ಕೆ ಬೆಳಕಾದವರು. ಅವರ ವಿಚಾರಧಾರೆಗಳನ್ನು ಇಂದಿನ ಸಮಾಜಕ್ಕೆ ಪ್ರಸ್ತುತವಾಗಿವೆ. ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಲು ಬುದ್ಧರ ಚಿಂತನೆ ಅಗತ್ಯ. ಸರ್ಕಾರದಿಂದ ಗೌತಮ ಬುದ್ಧರ ಜಯಂತಿ ಆಚರಿಸುತ್ತಿರುವುದು ಸಂತೋಷದ ವಿಚಾರ ಎಂದು ಹೇಳಿದರು.

ಕಂದಾಚಾರ, ಮೂಢ್ಯತೆ, ಹಿಂಸೆಗಳನ್ನು



ಪ್ರತಿರೋಧಿಸುವ ಮೂಲಕ ಬುದ್ಧ ಬಸವ ಅಂಬೇಡ್ಕರ್ ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಮಾನವನಾಗಲು ಸಾಧ್ಯ ಎಂದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಮಂಗಳ, ಉಪ ವಿಭಾಗಾಧಿಕಾರಿ ಜಂಬಂಗಿ ರೇಣುಕಾಪ್ರಸಾದ್, ಜಿಲ್ಲಾ ಪಂಚಾಯತಿ ಉಪ ಕಾರ್ಯದರ್ಶಿ ರಮೇಶ್, ತಹಶೀಲ್ದಾರ್ ನಯನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ವಿಜಯಲಕ್ಷ್ಮಿ, ಪೊಲೀಸ್ ಅಧೀಕ್ಷಕ ಜಗದೀಶ್, ಉಪನ್ಯಾಸಕ ಅರಿವು ಶಿವಪ್ಪ ಮುಖಂಡರಾದ ಪಂಡಿತ್ ಮುನಿವೆಂಕಟಪ್ಪ,

# ವಿಮಾನ ಹಾರಾಟದಲ್ಲಿ ಭಾರೀ ಬದಲಾವಣೆ

ಬೆಂಗಳೂರು

ವಿಮಾನ ಇಂಧನ ಏರಿಕೆಯಾಗುತ್ತಿರುವ ಹಿನ್ನೆಲೆ ಏರ್ ಇಂಡಿಯಾ ಜುಲೈವರೆಗಿನ ಅಂತಾರಾಷ್ಟ್ರೀಯ ವಿಮಾನ ಹಾರಾಟಗಳ ಸಂಖ್ಯೆ ಕಡಿತಗೊಳಿಸಿದೆ.

ಈ ಬಗ್ಗೆ ಏರ್ ಇಂಡಿಯಾ ಸಿಇಒ ಕ್ಯಾಂಪ್ಬೆಲ್ ವಿಲ್ಸನ್ ಅವರು ಮಾಹಿತಿ ಹಂಚಿಕೊಂಡಿದ್ದಾರೆ. ಏರಿಕೆಯಾಗುತ್ತಿರುವ ವಿಮಾನ ಇಂಧನ ದರ ಹಾಗೂ ವಾಯುಪ್ರದೇಶ ನಿರ್ಬಂಧದಿಂದಾಗಿ ಮಾರ್ಗ ಬದಲಾಯಿಸುವುದು ವಿಮಾನಯಾನ ಸಂಸ್ಥೆಗೆ ದುಬಾರಿಯಾಗುತ್ತಿದೆ. ಈಗಾಗಲೇ ಸಂಸ್ಥೆ ನಷ್ಟದಲ್ಲಿದ್ದು, ಇದರಿಂದ ಸಮಸ್ಯೆ ಇನ್ನಷ್ಟು ಹೆಚ್ಚಾಗುತ್ತಿದೆ. ಹೀಗಾಗಿ ಜುಲೈವರೆಗೆ ಸುಮಾರು 100 ಅಂತಾರಾಷ್ಟ್ರೀಯ ವಿಮಾನಗಳ ಹಾರಾಟವನ್ನು ಕಡಿತಗೊಳಿಸಲಿದೆ ಎಂದು ತಿಳಿಸಿದ್ದಾರೆ.

ಈಗಾಗಲೇ ಏಪ್ರಿಲ್ ಹಾಗೂ ಮೇನಲ್ಲಿ ಕೆಲವು ಅಂತಾರಾಷ್ಟ್ರೀಯ ವಿಮಾನಗಳ ಹಾರಾಟವನ್ನು ಕಡಿಮೆ ಮಾಡಲಾಗಿದೆ. ಇಂಧನ ದರ ಏರಿಕೆಯಿಂದಾಗಿ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸುತ್ತಿದ್ದು, ಹೀಗಾಗಿ ಜುಲೈವರೆಗೆ ಹೆಚ್ಚುವರಿ ಅಂತಾರಾಷ್ಟ್ರೀಯ ವಿಮಾನಗಳ ಹಾರಾಟವನ್ನು ಕಡಿತಗೊಳಿಸಲಾಗುವುದು ಎಂದಿದ್ದಾರೆ.

ದಿನನಿತ್ಯ ಏರ್ ಇಂಡಿಯಾ ಸುಮಾರು 1,100 ವಿಮಾನಗಳ ಹಾರಾಟ ಸೇವೆ ನೀಡುತ್ತಿತ್ತು. ಆದರೆ ಜೂನ್‌ನಲ್ಲಿ ಯುರೋಪ್, ಉತ್ತರ ಅಮೆರಿಕ, ಆಸ್ಟ್ರೇಲಿಯಾ ಹಾಗೂ ಸಿಂಗಾಪುರಕ್ಕೆ ನೀಡುವ ವಿಮಾನಗಳ ಹಾರಾಟ ಸೇವೆಯನ್ನು ಕಡಿತಗೊಳಿಸಲಿದೆ. ಇದರ ಹೊರತಾಗಿ ಸಂಸ್ಥೆಗೆ ಬೇರೆ ದಾರಿಯಿಲ್ಲ ಎಂದಿದೆ. ಏರ್ ಇಂಡಿಯಾ ಸಂಸ್ಥೆ 2026 ಮಾ.31ರ ಮುಕ್ತಾಯವಾದ ಹಣಕಾಸು ವರ್ಷದಲ್ಲಿ ಸುಮಾರು 22,000 ಕೋಟಿ ರೂ.ಗಳಿಗಿಂತ

# ಕರಗ ಮಹೋತ್ಸವಕ್ಕೆ ಮೆರಗು ತಂದ ಬಂಗಾರಪೇಟೆಯ ಉಟ್ಲು ಜಾತ್ರೆ

ಬೆಂಗಳೂರು

ಶ್ರೀ ಧರ್ಮರಾಯ ಸ್ವಾಮಿ ದೇವಾಲಯ ಆವರಣದಲ್ಲಿ ನಡೆಯುವ ಶ್ರೀ ದ್ರೌಪತಮ್ಮ ತಾಯಿ ಕರಗ ಮಹೋತ್ಸವದ ಅಂಗವಾಗಿ ಪ್ರತಿ ವರ್ಷ ಜರುಗುವ ಉಟ್ಲು ಜಾತ್ರೆ ಈ ಬಾರಿ ಸಹ ಅಪಾರ ಜನಸ್ತೋಮದ ನಡುವೆ ರೋಮಾಂಚನಕಾರಿ ರೀತಿಯಲ್ಲಿ ನೆರವೇರಿತು.

ಸಾಂಪ್ರದಾಯಿಕವಾಗಿ ಸುಮಾರು 20 ಅಡಿ ಎತ್ತರದ ಬಲಿಷ್ಠ ಮರದ ಕಂಭವನ್ನು ನೆಟ್ಟು ಅದರ ಮೇಲ್ಭಾಗದಲ್ಲಿ ಬಿಡಾರ ಮಾದರಿಯ ಗೂಡನ್ನು ನಿರ್ಮಿಸಲಾಗುತ್ತದೆ. ಗೂಡಿನೊಳಗೆ ನಾಲ್ವರು ಕುಳಿತುಕೊಳ್ಳುವ ವ್ಯವಸ್ಥೆ ಮಾಡಲಾಗುತ್ತದೆ. ಅಲ್ಲಿಂದ ಉದ್ದನೆಯ ಹಗ್ಗದ ಮೂಲಕ ಗೋಣಿ ಚೀಲಗಳಲ್ಲಿ ಕಟ್ಟಿದ ಎಳೆನೀರು ಕಾಯಿಗಳನ್ನು ತೂಗುಹಾಕಲಾಗುತ್ತದೆ.



ಮೇಲ್ಭಾಗದಲ್ಲಿ ಕುಳಿತವರು ಹಗ್ಗವನ್ನು ವೇಗವಾಗಿ ತಿರುಗಿಸುತ್ತಾರೆ. ಕೆಳಭಾಗದಲ್ಲಿ ನಿಂತಿರುವ ಯುವಕರು ತಿರುಗುತ್ತಾ ಬರುವ ಎಳೆನೀರು ಕಾಯಿಗಳನ್ನು ದೊಣ್ಣೆ ಮತ್ತು ಕೊಲುಗಳಿಂದ ಹೊಡೆದು ಒಡೆಯುವ ಸಾಹಸ ಪ್ರದರ್ಶಿಸುತ್ತಾರೆ. ಕಾಯಿಗಳು ಒಡೆಯುವಾಗ ಎಳೆನೀರು ಚಿಮ್ಮಿ ಜನರಲ್ಲಿ ಹರ್ಷೋದ್ಗಾರ ಮೂಡುತ್ತದೆ. ಒಂದೇ ವೇಳೆ ಹಲವಾರು ಕಾಯಿಗಳನ್ನು ಹೊಡೆಯುವ ದೃಶ್ಯ ನೋಡುಗರಲ್ಲಿ ಉತ್ಸಾಹ ತುಂಬುತ್ತದೆ.

ಜಿಲ್ಲೆಯಲ್ಲೇ ವಿಶಿಷ್ಟವಾಗಿ ನಡೆಯುವ ಈ ಉಟ್ಲು ಜಾತ್ರೆ ಜನಪದ ಸಂಸ್ಕೃತಿ, ಧೈರ್ಯ ಮತ್ತು ಸಾಮೂಹಿಕ ಹಬ್ಬದ ಸಂಕೇತವಾಗಿ ಗುರುತಿಸಿಕೊಂಡಿದೆ. ಸ್ಥಳೀಯರ ಜೊತೆಗೆ ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಂದಲೂ ಸಾವಿರಾರು ಮಂದಿ ಈ ಅಪರೂಪದ ಆಚರಣೆಯನ್ನು ಕಣ್ತುಂಬಿಕೊಳ್ಳಲು ಆಗಮಿಸುತ್ತಾರೆ. ಪುರಾತನ ಸಂಪ್ರದಾಯವನ್ನು ಉಳಿಸಿಕೊಂಡಿರುವ ಬಂಗಾರಪೇಟೆಯ ಉಟ್ಲು ಜಾತ್ರೆ ಜನಮನ ಸೆಳೆಯುವ ವಿಶಿಷ್ಟ ಹಾಗೂ ಆಕರ್ಷಕ ಧಾರ್ಮಿಕ

# ಪತ್ರಕರ್ತರಿಗೆ 5 ಎಕರೆ ಜಮೀನು ಮಂಜೂರು ಮಾಡಲು ಮನವಿ



ಬೆಂಗಳೂರು

ಸಮಾಜದ ಚಿಂತನೆಯಲ್ಲಿ ದುಡಿಯುವ ಪತ್ರಕರ್ತರಿಗೆ ಸೂರು ಕಲ್ಪಿಸಲು ಅಗತ್ಯವಾದ ನಿವೇಶನಕ್ಕಾಗಿ ಪ್ರತಿ ತಾಲ್ಲೂಕಿನಲ್ಲೂ ತಲಾ 5 ಎಕರೆ ಜಮೀನು ಮಂಜೂರು ಮಾಡುವಂತೆ ಕೋರಿ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಹಾಗೂ ವಿಧಾನಪರಿಷತ್ ಸದಸ್ಯ ಕೆ.ಶಿವಕುಮಾರ್ ಅವರಿಗೆ ಪತ್ರಕರ್ತರ ಸಹಕಾರ ಸಂಘದವತಿಯಿಂದ ಮನವಿ ಸಲ್ಲಿಸಲಾಯಿತು.

ಜಿಲ್ಲಾ ಪತ್ರಕರ್ತರ ಸಹಕಾರ ಸಂಘದ ಅಧ್ಯಕ್ಷ ಕೆ.ಎಸ್.ಗಣೇಶ್, ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಕೆ.ಚಂದ್ರಶೇಖರ್ ಜಂಟಿಯಾಗಿ ಮನವಿ ಸಲ್ಲಿಸಿ, ಜಿಲ್ಲೆಯಲ್ಲಿ ಅನೇಕ ಪತ್ರಕರ್ತರು ಸ್ವಂತ ಸೂರಿಲ್ಲದೇ ಜೀವನ ನಡೆಸುತ್ತಿದ್ದಾರೆ ಎಂದು ಗಮನಕ್ಕೆ ತಂದರು.

ಕೆ.ಎಸ್.ಗಣೇಶ್ ಮಾತನಾಡಿ, ಸರ್ಕಾರದಿಂದ ಜಮೀನು ಮಂಜೂರು ಮಾಡಿಸಿದಲ್ಲಿ ಪತ್ರಕರ್ತರ ವಿವಿಧೋದ್ದೇಶ ಸಹಕಾರ ಸಂಘದ ಮೂಲಕ ನಿವೇಶನ ಅಭಿವೃದ್ಧಿಪಡಿಸಿ ವೃತ್ತಿನಿರತ ಪತ್ರಕರ್ತರಿಗೆ ಹಂಚಲು ಕ್ರಮವಹಿಸುವುದಾಗಿ ನುಡಿದರು.

ವಿಧಾನಪರಿಷತ್ ಸದಸ್ಯ ಶಿವಕುಮಾರ್ ಹಾಗೂ ಕೆ.ವಿ.ಪ್ರಭಾಕರ್ ಅವರು ಈ ಕುರಿತು ಸಕಾರಾತ್ಮಕವಾಗಿ ಸ್ಪಂದಿಸಿ, ಮುಖ್ಯಮಂತ್ರಿಗಳ ಗಮನಕ್ಕೆ ತರುವುದಾಗಿಯೂ ತಿಳಿಸಿದರು. ಈ ಸಂಬಂಧ ಜಿಲ್ಲಾಧಿಕಾರಿಗಳಿಗೂ ಪತ್ರ ಬರೆಯುವುದಾಗಿ ನುಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎ.ಜಿ.ಸುರೇಶ್‌ಕುಮಾರ್, ಖಜಾಂಚಿ ರಾಜೇಂದ್ರ ಸಿಂಹ, ರಾಜ್ಯಕಾರ್ಯಕಾರಿ ಸದಸ್ಯ ವಿ.ಮುನಿರಾಜು, ಕಾರ್ಯನಿರತ ಪತ್ರಕರ್ತರ ಸಂಘದ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷ ಅಬ್ಬಣಿ ಶಂಕರ್, ಹಿರಿಯ ಪತ್ರಕರ್ತರಾದ ಮಹಮದ್ ಯೂನುಸ್, ಸದಾನಂದ್ ವೆಂಕಟೇಶ್‌ಬಾಬಾ,

# ಅಪರಿಚಿತ ಶವದ ಪತ್ತೆಗಾಗಿ ಮನವಿ

ಬೆಂಗಳೂರು

ಅಪರಿಚಿತ ಮೃತಪಟ್ಟಿರುವ ಚಹರೆ ಹೆಸರು. ಗೊತ್ತಿಲ್ಲ. ವಯಸ್ಸು.55–60ವರ್ಷ, 4.5 ಅಡಿ ಎತ್ತರ, ಗೋಧಿ ಮೈಬಣ್ಣ, ಸಾಧಾರಣಾ ಮೈಕಟ್ಟು, ದುಂಡು ಮುಖ, ಬಿಳಿ ಕೂದಲು, ಮೃತರ ಎದೆಯ ಮೇಲೆ ಹಚ್ಚೆ ಹಾಕಿರುತ್ತೆ. ಬಿಳಿ ಹೂ ಗಳಿರುವ ನೈಟಿ ಧರಿಸಿರುತ್ತಾರೆ.

ಈ ಮೃತ ಮಹಿಳೆಯ ಬಗ್ಗೆ ಮಾಹಿತಿ ತಿಳಿದು ಬಂದಲ್ಲಿ ಪೊಲೀಸ್ ಅಧೀಕ್ಷಕರ ಪೋ.ನಂ–08152–243066, 9480802601/02, ಡಿ.ವೈ.ಎಸ್.ಪಿ–9480802620, ಕೋಲಾರ ಉಪವಿಭಾಗದ ನಂ.08152–246421, ವೇಮಗಲ್ ಪೊಲೀಸ್ ಠಾಣೆಯ ಅರಕ್ಷಕ ನಿರೀಕ್ಷಕರ ಸಂ. 9480802649 ಯನ್ನು ಸಂಪರ್ಕಿಸಿ ಮಾಹಿತಿ ನೀಡಬಹುದೆಂದು ವೇಮಗಲ್ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನೇಣುಬಿಗಿದ ಸ್ಥಿತಿಯಲ್ಲಿ ಜಡ್ಜ್‌ಶವ ಪತ್ತೆ

ಬೆಂಗಳೂರು

ತಮ್ಮ ಮನೆಯ ಕೊಠಡಿಯಲ್ಲೇ ಸೀಲಿಂಗ್ ಫ್ಯಾನ್‌ಗೆ ನೇಣು ಬಿಗಿದ ಸ್ಥಿತಿಯಲ್ಲಿ ಜಡ್ಜ್ ಶವ ಪತ್ತೆಯಾಗಿರುವ ಘಟನೆ ದೆಹಲಿಯ ಸಫ್ದರ್ಜಂಗ್ ಪ್ರದೇಶದಲ್ಲಿ ನಡೆದಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ.

ಅಮನ್ ಕುಮಾರ್ ಶರ್ಮಾ (30) ಮೃತ ದುರ್ದೈವಿ. ಅವರ ಸೋದರ ಮಾವ ಪೊಲೀಸರಿಗೆ ಮಾಹಿತಿ ನೀಡಿದ ಬಳಿಕ ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಪರಿಶೀಲಿಸಿ, ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿದ್ದಾರೆ. ಸಾವಿಗೆ ನಿಖರ ಕಾರಣ ಇನ್ನೂ ತಿಳಿದುಬಂದಿಲ್ಲ, ಜೊತೆಗೆ ಯಾವುದೇ ಡೆತ್ ನೋಟ್ ಕೂಡ ಪತ್ತೆಯಾಗಿಲ್ಲ, ಒಟ್ಟಿನಲ್ಲಿ ಎಲ್ಲಾ ಆಯಾಮಗಳಲ್ಲೂ ತನಿಖೆ ನಡೆಸಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಪುಣೆಯ ಸಿಂಬಿಯೋಸಿಸ್ ಕಾನೂನು ಶಾಲೆಯಿಂದ ಪದವಿ ಪಡೆದ ಅಮನ್ ಕುಮಾರ್ ಶರ್ಮಾ 2018 ರಲ್ಲಿ ಬಿಎಎಲ್‌ಎಲ್‌ಬಿ ಪೂರ್ಣಗೊಳಿಸಿದರು. 2021ರ ಜೂನ್ 19 ರಂದು ದೆಹಲಿಯ ನ್ಯಾಯಾಂಗ ಸೇವೆಗೆ ಸೇರಿದ್ದರು. ಜಡ್ಜ್ ಹುದ್ದೆಗೇರುವ ಜೊತೆಗೆ ದೆಹಲಿಯ ಕರ್ಕಾರ್ಡೂಮಾ ನ್ಯಾಯಾಲಯದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯದರ್ಶಿಯಾಗಿಯೂ ನೇಮಿಸಲಾಗಿತ್ತು.

# 'ಗ್ರಾಹಕರಿಗೆ ಬೇಡಿಕೆ ಹಾಕಿದಲ್ಲಿ ಬೆಸ್ಕಾಂ ಕಚೇರಿಗೆ ಮಾಹಿತಿ ನೀಡಿ'

ಬೆಂಗಳೂರು

ಕೆಲವು ಅಪರಿಚಿತ ವ್ಯಕ್ತಿಗಳು ನಾವು ಬೆಸ್ಕಾಂನ ಸಹಾಯಕ ಇಂಜಿನಿಯರ್ ಅಥವಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಎಂದು ಹೇಳಿಕೊಂಡು ಮನೆಗಳಿಗೆ ಬಂದು ಹೆಚ್ಚುವರಿ ಲೋಡ್ ಹಾಕಿರುತ್ತೀರ ಅಥವಾ ಜಕಾತಿ ದುರುಪಯೋಗ ಮಾಡಿರುತ್ತೀರ ಎಂದು ತಮ್ಮ ಮೇಲೆ ಕೇಸ್ ಹಾಕಲಾಗುವುದು ಅಥವಾ ದಂಡ ವಿಧಿಸಲಾಗುವುದು ಎಂದು ಬೆದರಿಸುವುದು ಹಾಗೂ ಗ್ರಾಹಕರುಗಳಿಂದ ಹಣ ವಸೂಲಾತಿ ಮಾಡುತ್ತಿರುವುದರ ಬಗ್ಗೆ ಬೆಸ್ಕಾಂ ಕಚೇರಿಗೆ ದೂರು ಬಂದಿರುತ್ತದೆ.

ಆದ್ದರಿಂದ ತಮ್ಮ ಮನೆಗಳಿಗೆ ಅಥವಾ ತಮ್ಮ ಸ್ಥಾವರಕ್ಕೆ ಯಾರಾದರು ಅಪರಿಚಿತರು ಹಾಗೂ ಸಿಬ್ಬಂದಿಗಳು ಬಂದು ಈ ರೀತಿ ಬೇಡಿಕೆಯನ್ನು ಹಾಕಿದಲ್ಲಿ ತಾವುಗಳು ಕೂಡಲೇ ಬೆಸ್ಕಾಂ, ನಗರ ಉಪ ವಿಭಾಗ–1ರ ಕಚೇರಿಗೆ ಮಾಹಿತಿ ನೀಡಲು ಕೋರಲಾಗಿದೆ ಅಥವಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಮೊಬೈಲ್ ಸಂಖ್ಯೆ 9448279045ಕ್ಕೆ ಕರೆಯ ಮೂಲಕ ಮಾಹಿತಿ ನೀಡಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಹೆಚ್.ಪಿ. ನಾಗರಾಜು ಮನವಿ ಮಾಡಿದ್ದಾರೆ.

# ಕೈಪು ಲಕ್ಷ್ಮೀನರಸಿಂಹಶಾಸ್ತ್ರೀಗಳಿಗೆ ನಾರೇಯಣ ಪ್ರಶಸ್ತಿ

ಬೆಂಗಳೂರು

ಸದ್ಗುರು ಶ್ರೀಯೋಗಿನಾರೇಯಣ ತಾತಯ್ಯನವರ ತತ್ವಬೋಧನೆಗಳಿಗೆ ಭಾವಾನುವಾದ, ತಾತ್ಪರ್ಯಗಳನ್ನು ರಚಿಸಿ ಅಪಾರ ಕೊಡುಗೆಯನ್ನು ನೀಡಿರುವ ದಿವಂಗತ ಶ್ರೀಕೈಪು ಲಕ್ಷ್ಮೀನರಸಿಂಹಶಾಸ್ತ್ರಿಗಳಿಗೆ ಸದ್ಗುರು ಶ್ರೀಯೋಗಿನಾರೇಯಣ ಮಠದಿಂದ ಮರಣೋತ್ತರವಾಗಿ "ನಾರೇಯಣ" ಪ್ರಶಸ್ತಿಯನ್ನು ಮೇ 9 ರಂದು ಸಂಜೆ 5 ಗಂಟೆಗೆ ಪ್ರದಾನ ಮಾಡಲಾಗುತ್ತದೆ. ಪ್ರಶಸ್ತಿಯು ಒಂದು ಲಕ್ಷ ರೂಗಳನ್ನು ಒಳಗೊಂಡಿರುತ್ತದೆ ಎಂದು ಕೈವಾರ ಕ್ಷೇತ್ರದ ಧರ್ಮಾಧಿಕಾರಿಗಳಾದ ಡಾ॥ಎಂ.ಆರ್. ಜಯರಾಮ್ ರವರು ತಿಳಿಸಿದ್ದಾರೆ.

ಧರ್ಮಾಧಿಕಾರಿಗಳು ಕೈವಾರದ ಸದ್ಗುರು ಶ್ರೀಯೋಗಿನಾರೇಯಣ ಮಠದಲ್ಲಿ ಈ ವಿಷಯವನ್ನು ಸುದ್ದಿಗಾರರಿಗೆ ತಿಳಿಸುತ್ತಾ ಮಾತನಾಡಿದರು.

ಟ್ರಸ್ಟ್ ಸಮಿತಿಯ ಸದಸ್ಯರ ಸಭೆಯಲ್ಲಿ ಈ ನಿರ್ಣಯವನ್ನು ತೆಗೆದುಕೊಳ್ಳಲಾಗಿದೆ. ಕೈವಾರ ತಾತಯ್ಯನವರ 300 ನೇ ಜಯಂತಿಯನ್ನು ವರ್ಷಪೂರ್ತಿ ಆಚರಿಸುತ್ತಿರುವ ಈ ಸಂದರ್ಭದಲ್ಲಿ ಸೂಕ್ತ ವ್ಯಕ್ತಿಗಳಿಗೆ ನಾರೇಯಣ ಪ್ರಶಸ್ತಿಯನ್ನು ನೀಡಿ ಗೌರವಿಸಲು ತೀರ್ಮಾನಿಸಲಾಗಿದೆ. ಅದರಂತೆ ಕೈಪು ಲಕ್ಷ್ಮೀನರಸಿಂಹಶಾಸ್ತ್ರಿಗಳಿಗೆ ಪ್ರಥಮವಾಗಿ ನಾರೇಯಣ ಪ್ರಶಸ್ತಿಯನ್ನು ನೀಡಲಾಗುತ್ತಿದೆ




ಎಂದರು.

ಶ್ರೀಕೈಪು ಲಕ್ಷ್ಮೀನರಸಿಂಹಶಾಸ್ತ್ರಿಗಳು ಕೈವಾರ ಶ್ರೀಯೋಗಿನಾರೇಯಣ ತಾತಯ್ಯನವರ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿ, ತಾತಯ್ಯನವರು ರಚಿಸಿರುವ ಎಲ್ಲಾ ಗ್ರಂಥಗಳಿಗೆ ವ್ಯಾಖ್ಯಾನ ತಾತ್ಪರ್ಯವನ್ನು ರಚಿಸಿ ಬಹುದೊಡ್ಡ ಕೊಡುಗೆಯನ್ನು ನೀಡಿದ್ದಾರೆ. ಇದು ಅವರ ಜೀವಮಾನದ ಸಾಧನೆಯಾಗಿದೆ ಎಂದರು.

ಶ್ರೀಯೋಗಿನಾರೇಯಣ ಸಂಕೀರ್ತನಾ ಯೋಜನೆಯ ಸಂಚಾಲಕರಾದ ವಿದ್ವಾನ್ ವಾನರಾಶಿ ಬಾಲಕೃಷ್ಣ ಭಾಗವತರ್ ರವರು ಮಾತನಾಡುತ್ತಾ 1978 ರಲ್ಲಿ ಕೀರ್ತಿಶೇಷ ಪೂಜ್ಯ ಡಾ॥ಎಂ.ಎಸ್.ರಾಮಯ್ಯನವರು ಕೈವಾರ ಕ್ಷೇತ್ರದ ಧರ್ಮಾಧಿಕಾರಿಗಳಾದರು. ಅವರು ತಾತಯ್ಯನವರ ತತ್ವ ಬೋಧನೆಗಳಿಗೆ ಮಾರುಹೋಗಿ ಅವರ ಸಾಹಿತ್ಯವನ್ನು ಪ್ರಚಾರ ಮಾಡುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾದರು. ಅಲ್ಲಿಯವರೆಗೂ ತಾತಯ್ಯನವರ ಎಲ್ಲಾ ಬೋಧನೆ,ಕೀರ್ತನೆ, ಶತಕಗಳು, ಕಾಲಜ್ಞಾನ ಎಲ್ಲವೂ ಒಂದೇ ಪುಸ್ತಕದಲ್ಲಿ ಅಡಕವಾಗಿತ್ತು. ಈ ಸಂದರ್ಭದಲ್ಲಿ ತಾತಯ್ಯನವರ ಸಾಹಿತ್ಯವನ್ನು ಪುನರ್ವಿಂಗಡಿಸುವ ಕಾರ್ಯ ಆರಂಭವಾಯಿತು. ಆದರೆ ಈ ಕಾರ್ಯಕ್ಕೆ ಸೂಕ್ತವಾದ ವ್ಯಕ್ತಿಯ ಆಯ್ಕೆಗೆ ಮುಂದಾದರು. ಆಗ ಟ್ರಸ್ಟ್‌ನ ಸದಸ್ಯರೆಲ್ಲರೂ ಒಮ್ಮತದಿಂದ ಆರಿಸಿದ ವ್ಯಕ್ತಿಯೇ ಶ್ರೀಕೈಪು ಲಕ್ಷ್ಮೀನರಸಿಂಹಶಾಸ್ತೀಗಳು ಎಂದರು.

ಕೈಪು ಲಕ್ಷ್ಮೀನರಸಿಂಹಶಾಸ್ತ್ರೀಗಳು ಕನ್ನಡ ಪಂಡಿತರು, ಹಿಂದೀ ರಾಷ್ಟ್ರಭಾಷೆ ಪ್ರವೀಣರಾಗಿದ್ದ ಇವರು ಆಡು ಮುಟ್ಟದ ಸೊಪ್ಪಿಲ್ಲ ಎನ್ನುವಂತೆ ಕರ್ನಾಟಕ ಶಾಸ್ತ್ರೀಯ ಹಾಡುಗಾರಿಕೆ, ಮೃದಂಗ, ಕೊಳಲು, ಹಾರ್ಮೋನಿಯಂ ವಾದನ, ಗಮಕಕಲೆ, ಹರಿಕಥಾ ಕೀರ್ತನೆ ಹೀಗೆ ನಾನಾ ರಂಗಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದಿದ್ದರು. ವೇದ, ಶಾಸ್ತ್ರ, ಪುರಾಣಗಳ ಆಳವಾದ ಅಧ್ಯಯನವನ್ನು ಮಾಡಿದ್ದರು. ನಾಡಿನಾದ್ಯಂತ ಹಲವಾರು ಸಂಗೀತ, ಗಮಕ, ಉಪನ್ಯಾಸ, ಕಥಾಕೀರ್ತನೆ ಹೀಗೆ ಹಲವಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕ್ರಿ.ಶ.1960ರಲ್ಲಿಯೇ ಕೈವಾರ ತಾತಯ್ಯನವರ ಬಗ್ಗೆ ಶ್ರೀಯುತರು ಲೇಖನ ಬರೆದಿದ್ದರು ಹಾಗೂ ಕೈವಾರ ಕ್ಷೇತ್ರ ಎಂಬ ಪುಸ್ತಕವನ್ನು ಪ್ರಕಟಿಸಿದ್ದರು. ಈ ಹಿನ್ನಲೆಯಲ್ಲಿ ಕೈವಾರ ತಾತಯ್ಯನವರ ಜೀವನ–ಸಾಧನೆ–ಕೃತಿಗಳನ್ನು ಕುರಿತು ಪ್ರಥಮವಾಗಿ ಸಾಹಿತ್ಯಲೋಕಕ್ಕೆ ಪರಿಚಯಿಸಿದ ಕೀರ್ತಿಯೂ ಕೈಪುಸ್ವಾಮಿಗಳಿಗೆ ಸಲ್ಲುತ್ತದೆ ಎಂದರು.

ಇವರು ಮೊದಲಿಗೆ ತಾತಯ್ಯನವರಿಂದ ರಚಿತವಾಗಿದ್ದ ತಾಳೆಗರಿಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ಮಗ್ನರಾದರು. ನಂತರ ಆ ತಾಳೆಗರಿಯಲ್ಲಿರುವಂತೆ ಪುಸ್ತಕಗಳನ್ನು ವಿಂಗಡಿಸಿದರು. ನಂತರ ಈ ಎಲ್ಲಾ ಸಾಹಿತ್ಯಕ್ಕೆ ವ್ಯಾಖ್ಯಾನವನ್ನು ಬರೆದು ಪ್ರಸಿದ್ಧಿಗೊಳಿಸಿದರು. ಕಾಲಾಂತರದಲ್ಲಿ ಸ್ಪಷ್ಟವಾದ ವ್ಯಾಖ್ಯಾನ–ತಾತ್ಪರ್ಯಗಳನ್ನೊಳಗೊಂಡ ಹಲವಾರು ಪುಸ್ತಕಗಳನ್ನು ಶ್ರೀಯುತರಿಂದ ರಚನೆಯಾಯಿತು. ನಾದಬ್ರಹ್ಮಾನಂದ ನಾರೇಯಣ ಕವಿಶತಕ, ಶ್ರೀಕೃಷ್ಣಚರಿತ ತತ್ವಾಮೃತ ಯೋಗಸಾರಮು, ತಾರಕಬ್ರಹ್ಮಾನಂದ ದ್ವಯಕಂದ ಶತಕ, ಬ್ರಹ್ಮಾಂಡಪುರಿ ಶತಕ, ಅಮರನಾರೇಯಣ ಶತಕ, ಕಾಲಜ್ಞಾನ–ಭವಿಷ್ಯವಾಣಿ. ಇವು ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಪ್ರಕಟವಾಗಿದೆ. ಶ್ರೀಯುತರು 2012 ರಲ್ಲಿ ನಡೆದ ಚಿಕ್ಕಬಳ್ಳಾಪುರ ಜಿಲ್ಲೆಯ ಎರಡನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀಕ್ಷೇತ್ರ ಕೈವಾರದಿಂದ ಪ್ರಕಟವಾಗುವ ಮಲ್ಲಾರ ಮಾಸಪತ್ರಿಕೆಗೆ ಸಂಪಾದಕರಾಗಿ ಹಲವಾರು ವರ್ಷಗಳು ಕೆಲಸಮಾಡಿದ್ದಾರೆ. ಇವರು ಮಾಡಿರುವ ಸೇವೆಯನ್ನು ಗುರುತಿಸಿ ಮರಣೋತ್ತರವಾಗಿ ಪ್ರಪಥಮವಾಗಿ ನಾರೇಯಣ ಪ್ರಶಸ್ತಿಯನ್ನು ನೀಡಲಾಗುತ್ತಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಕೈವಾರ ಮಠ ಟ್ರಸ್ಟ್‌ನ ಉಪಾಧ್ಯಕ್ಷರಾದ ಜೆ.ವಿಭಾಕರರೆಡ್ಡಿ ಹಾಗೂ ವ್ಯವಸ್ಥಾಪಕ ಕೆ.ಲಕ್ಷ್ಮೀನಾರಾಯಣ್ ಉಪಸ್ಥಿತರಿದ್ದರು.

# ವಿದ್ಯುತ್ ವ್ಯತ್ಯಯ

ಬೆಂಗಳೂರು

ಬೆಸ್ಕಾಂ ಗ್ರಾಮೀಣ ಉಪವಿಭಾಗ–2ರ ಹೆಬ್ಬೂರು ಶಾಖಾ ವ್ಯಾಪ್ತಿಯಲ್ಲಿ ಹೆಚ್.ಟಿ. ಮಾರ್ಗದಲ್ಲಿ ಲಿಂಕ್ ಲೈನ್ ಕಾಮಗಾರಿ ಕೈಗೊಂಡಿರುವ ಹಿನ್ನೆಲೆಯಲ್ಲಿ ಮೇ 5ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಹೆಬ್ಬೂರು, ಸಿರಿವರ, ಬಳ್ಳಗೆರೆ, ನಿಡುವಳಲು ಮತ್ತು ಕಣಕುಪ್ಪೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮನವಿ ಮಾಡಿದ್ದಾರೆ.

Printed by gandasi sadananda swamy, published by gandasi sadanandaswamy, owned by gandasi sadananda swamy. Printed at LAVANYA MUDRANA No. 79, TR mill, compound, 5th main 9th corss, Chamarajpet Bangalore-560018, published at No.531, prakruthi nilaya, kalikanagar, Andrahalli, Vishwaneedam Post, Bangalore-560091. Editor: Gandasi sadanandaswamy